ಪ್ರಸ್ತಾವವನ್ನು ಮಂಡಿಸಲಾಯಿತು.

ಅಧ್ಯಕ್ಷರು:– ಶ್ರೀ ಡಿ.ಕೆ.ಶಿವಕುಮಾರ್‌ರವರು ಸೂಚಿಸಿರುವ ಹಾಗೂ ಶ್ರೀ ಎನ್.ಎಸ್.ಬೋಸರಾಜುರವರು ಅನುಮೋದಿಸಿರುವ ಪ್ರಸ್ತಾವ ಈ ರೀತಿ ಇದೆ.

"ಶ್ರೀ ಎನ್.ವೈ.ಗೋಪಾಲಕೃಷ್ಣ ಅವರನ್ನು ವಿಧಾನ ಸಭೆಯ ಉಪಾಧ್ಯಕ್ಷರನ್ನಾಗಿ ಚುನಾಯಿಸುವುದು"

ಪ್ರಸ್ತಾವ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು ಮತ್ತು

ಶ್ರೀ ಎನ್.ವೈ.ಗೋಪಾಲಕೃಷ್ಣ ಇವರನ್ನು ಉಪಾಧ್ಯಕ್ಷರನ್ನಾಗಿ ಚುನಾಯಿಸಲಾಯಿತು

ದಿನಾಂಕ 17.03.2005 (01–02ಬಿ) 10.00–10.10 ಎಂಎಸ್‌ಕೆ:ಆರ್‌ಎನ್‌ಎಸ್

ಅಧ್ಯಕ್ಷರು :– ಮಾನ್ಯ ಎನ್.ವೈ.ಗೋಪಾಲಕೃಷ್ಣ ಅವರು ಸರ್ವಾನುಮತದಿಂದ ವಿಧಾನ ಸಭೆಯ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಮಾನ್ಯ ಎನ್.ವೈ.ಗೋಪಾಲಕೃಷ್ಣ ಅವರು ಮೂರನೆಯ ಬಾರಿಗೆ ವಿಧಾನ ಸಭೆಗೆ ಆಯ್ಕೆಯಾಗಿ ಬಂದಿದ್ದಾರೆ. ಅವರು ತಮ್ಮ ನಡವಳಿಕೆಯಿಂದ ಮತ್ತು ಅವರ ಕೆಲಸದಿಂದ ಅಪಾರವಾದ ಜನಪ್ರಿಯತೆಯನ್ನು ಗಳಿಸಿದ್ದಾರೆ. ಹಿಂದುಳಿದವರ ಅಭಿವೃದ್ಧಿಯ ಬಗ್ಗೆ ಅಪಾರವಾದ ಕಾಳಜಿಯನ್ನು ಇಟ್ಟುಕೊಂಡು. ಆ ವರ್ಗಗಳ ಅಭಿವೃದ್ಧಿಗೆ ಅವರು ಅಹರ್ನಿಶಿ ದುಡಿಯುತ್ತಿದ್ದಾರೆ. ಅವರು ಈ ಸಭೆಯ ಉಪಾಧ್ಯಕ್ಷರಾಗಿ ಈ ಸಭೆಯ ಗೌರವವನ್ನು ಎತ್ತಿಹಿಡಿಯುತ್ತಾರೆ ಅನ್ನತಕ್ಕಂಥ ಭಾವನೆಯನ್ನು ವ್ಯಕ್ತ ಮಾಡುತ್ತಾ ಮಾನ್ಯ ಎನ್.ವೈ.ಗೋಪಾಲಕೃಷ್ಣ ಅವರನ್ನು ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿ) :– ಮಾನ್ಯ ಅಧ್ಯಕ್ಷರೇ. ಮಾನ್ಯ ಎನ್.ವೈ.ಗೋಪಾಲಕೃಷ್ಣ ಅವರನ್ನು ಇವತ್ತು ಈ ಮನೆ ಸರ್ವಾನುಮತದಿಂದ ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಿದೆ. ನಮ್ಮ ಹಿರಿಯ ಸದಸ್ಯರಾದಂತಹ ಡಿ.ಕೆ.ಶಿವಕುಮಾರ್, ಎನ್.ಎಸ್.ಬೋಸರಾಜು ಮತ್ತು ಇನ್ನಿತರ ಎಲ್ಲಾ ಸದಸ್ಯರು ಕೊಟ್ಟಂತಹ ಪ್ರಪೋಸಲ್ ಅಂಗೀಕಾರವಾಗಿದೆ. ಇದಕ್ಕೆ ಪ್ರಪ್ರಥಮವಾಗಿ ನಾನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಅಭಿನಂದಿಸಬೇಕಾಗುತ್ತದೆ. 79ರ ಸಂಖ್ಯೆಯಲ್ಲಿ ಅವರ ಪಕ್ಷದವರು ಇದ್ದರೂ ಕೂಡ ಇವತ್ತು ಈ ಮನೆಯಲ್ಲಿ ಮಾನ್ಯ ಗೋಪಾಲಕೃಷ್ಣ

ಅವರು ಡೆಪ್ಯೂಟಿ ಸ್ಪೀಕರ್ ಹುದ್ದೆ ಆಯ್ಕೆಯಾಗಬೇಕೆಂಬ ತೀರ್ಮಾನವನ್ನು ನಾವು ಕೈಗೊಂಡಾಗ ಯಾವ ಚರ್ಚೆಯಿಲ್ಲದೆ ಸರ್ವಸಮ್ಮತದಿಂದ ಅವರೂ ಕೂಡ ಒಪ್ಪಿದ್ದಾರೆ. ನಮ್ಮ ಶ್ರೀರಾಮರೆಡ್ಡಿಯವರು ಮತ್ತು ಅನೇಕ ಮಿತ್ರರು ಇದಕ್ಕೆ ಒಪ್ಪಿದ್ದಾರೆ. ಅಧ್ಯಕ್ಷರಾದ ತಮಗೆ ಈ ಮನೆಯ ಘನತೆ. ಗೌರವ ನೀಡಲಾಗಿದೆ. ಸಮ್ಮಿಶ್ರ ಸರ್ಕಾರದ ಪ್ರಪ್ರಥಮವಾಗಿ ಅಧ್ಯಕ್ಷರ ಪೀಠವನ್ನು ತಾವು ಅಲಂಕರಿಸುವ ಕಾಲದಲ್ಲಿ ಕೂಡ ಎಲ್ಲಾ ವಿರೋಧಪಕ್ಷದ ಸದಸ್ಯರು ಸರ್ವಸಮ್ಮತದಿಂದ ತಮ್ಮನ್ನು ಆಯ್ಕೆ ಮಾಡಿದ್ದಾರೆ. ಅದೇರೀತಿ ಇವತ್ತು ಶ್ರೀ ಎನ್.ವೈ.ಗೋಪಾಲಕೃಷ್ಣ ಅವರನ್ನು ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ. ಶ್ರೀ ಗೋಪಾಲಕೃಷ್ಣ ಅವರು ಅತ್ಯಂತ ಮೃದು ಸ್ವಭಾವದ ವ್ಯಕ್ತಿಯಾಗಿದ್ದೂ ವಿಧಾನಸಭೆಗೆ ಮೂರನೇ ಬಾರಿ ಆಯ್ಕೆಯಾಗಿ ಬಂದಿದ್ದಾರೆ. ಇವರು ಈ ರಾಜ್ಯದಲ್ಲಿರತಕ್ಕಂತಹ ಅತ್ಯಂತ ಹಿಂದುಳಿದ ಜನಾಂಗಕ್ಕೆ ಸಂಬಂಧಪಟ್ಟ ವ್ಯಕ್ತಿಯಾಗಿದ್ದಾರೆ. ಇದಕ್ಕೆ ಮುಂಚೆ ಕೈಗಾರಿಕಾ ಸಮಿತಿಯ ಅಧ್ಯಕ್ಷರಾಗಿ ಹಲವು ಸಮಿತಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಕೆಲಸಕಾರ್ಯಗಳನ್ನು ಮಾಡಿದ್ದಾರೆ. ಇವತ್ತು ಎರಡು ವರ್ಷಗಳ ಹೊಂದಾಣಿಕೆ ಇರುವ ಸಮ್ಮಿಶ್ರ ಸರ್ಕಾರ ಈ ರಾಜ್ಯದಲ್ಲಿದೆ. ತಾವು ಈ 10 ತಿಂಗಳಲ್ಲಿ ಈ ವಿಧಾನಸಭೆ ನಾಲ್ಕನೇ ಸಾರಿ ಬಂದರೂ ಬಹಳ ವ್ಯವಸ್ಥಿತವಾದ ರೀತಿಯಲ್ಲಿ ಬಹಳ ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಣೆ ಮಾಡಿದ್ದೀರಿ. ಅದೇ ದಿಕ್ಕಿನಲ್ಲಿ ಇವತ್ತಿನ ದಿವಸ ಸದನ ಬಹಳ ದಿವಸ ನಡೆಯಬೇಕು ಎನ್ನುವ ಭಾವನೆ ಸದಸ್ಯರಿಗಿದೆ. ಅದಕ್ಕೆ ಅನುಕೂಲವಾಗಿ ತಮಗೆ ಹೆಚ್ಚಿನ ರೀತಿಯಲ್ಲಿ ಸಹಾಯಕವಾಗುವಂತಹ ರೀತಿಯಲ್ಲಿ ಒಬ್ಬರು ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದೇವೆ. ಇದರಿಂದ ತಮಗೂ ಕೂಡ ಕಾರ್ಯವನ್ನು ನಿರ್ವಹಿಸಲಿಕ್ಕೆ ಸುಗಮವಾಗುತ್ತದೆ. ಇವತ್ತು ತಾವು ಅಧ್ಯಕ್ಷರಾಗಿದ್ದೀರಿ. ಶ್ರೀ ಎನ್.ವೈ.ಗೋಪಾಲಕೃಷ್ಣ ಅವರು ಉಪಾಧ್ಯಕ್ಷರಾಗಿದ್ದಾರೆ. ಇವರಿಬ್ಬರಿಗೂ ಕೂಡ ಸದನದಲ್ಲಿ ಘನತೆಯಿದೆ. ಸದನದಲ್ಲಿ ಆಗತಕ್ಕಂತಹ ಚರ್ಚೆಗೆ ಹೆಚ್ಚಿನ ಒಂದು ಮಹತ್ವವನ್ನು ಕೊಡುತ್ತೇವೆ. ಇವತ್ತಿನ ದಿವಸ ನಾನು ಅತ್ಯಂತ ಸಂತೋಷದ ಸಭಾನಾಯಕನಾಗಿ ಶ್ರೀ ಗೋಪಾಲಕೃಷ್ಣರವರನ್ನು ಉಪಾಧ್ಯಕ್ಷರ ಸ್ಥಾನಕ್ಕೆ ಬಹಳ ಗೌರವಪೂರ್ಣವಾಗಿ. ಅವರ ಆಯ್ಕೆಯನ್ನು ಸ್ವಾಗತ ಮಾಡಿ. ತಮ್ಮ ಮೇಲಿರುವ ಜವಾಬ್ದಾರಿಯನ್ನು ಸಂಪೂರ್ಣವಾಗಿ ನಿರ್ವಹಣೆ ಮಾಡುತ್ತೀರೆಂದು ಭರವಸೆ ಹೊಂದಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು): ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದಂತೆ. ಹಾಗೂ ತಾವು ಈಗಾಗಲೇ ಘೋಷಣೆ ಮಾಡಿದಂತೆ ಶ್ರೀ ಎನ್.ವೈ.ಗೋಪಾಲಕೃಷ್ಣ ಅವರು ವಿಧಾನಸಭೆಯ ಉಪಾಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾಗಿರುವುದು ಎಲ್ಲರಿಗೂ ಸಂತೋಷ ತರುವಂತಹ ಸಂಗತಿಯಾಗಿದೆ. ಮೂರು ಬಾರಿ ಶಾಸಕರಾಗಿ ಅತ್ಯಂತ ಹಿಂದುಳಿದಿರುವ ಕುಟುಂಬದಿಂದ ಬಂದು ಅನೇಕ ಸಂಘಸಂಸ್ಥೆಗಳಲ್ಲಿ ಕೆಲಸ ಮಾಡಿದ್ದಾರೆ. ಅವರು ಅನೇಕ ಸಮಿತಿಗಳಲ್ಲಿ ಕೆಲಸಮಾಡುವಾಗ ಅವರೊಂದಿಗೆ ಶಾಸಕರಾಗಿ ನಾವು ಪ್ರವಾಸ ಮಾಡುವ ಅವಕಾಶ ಈ ಹಿಂದೆ ಸಿಕ್ಕಿತ್ತು. ಅವರೊಬ್ಬ ಸರಳ ಸಜ್ಜನಿಕೆ ವ್ಯಕ್ತಿಯೆಂದು ಹೇಳಲಿಕ್ಕೆ ನಾನು ಹೆಮ್ಮೆಪಡುತ್ತೇನೆ. ಅಧ್ಯಕ್ಷರಾಗಿ ತಾವು ಯಾವರೀತಿ ಸದನ ಕಾರ್ಯಕಲಾಪಗಳನ್ನು ನಿರ್ವಹಿಸುತ್ತಿದ್ದೀರಿ ಅದೇರೀತಿ ಇವತ್ತು ಸರ್ವಾನುಮತದಿಂದ ಆಯ್ಕೆಯಾಗಿರುವ ಶ್ರೀ ಎನ್.ವೈ.ಗೋಪಾಲಕೃಷ್ಣ ಅವರು ಕೂಡ ಕೆಲಸ ಮಾಡುತ್ತಾರೆ ಎನ್ನುವ ವಿಶ್ವಾಸ ನಮಗೆ ಇದೆ. ಇವತ್ತಿನಿಂದ ವಿಧಾನಸಭೆಯ ಅಧ್ಯಕ್ಷರಾಗಿ ತಮಗಿದ್ದ ಜವಾಬ್ದಾರಿಯ ಭಾರ ಸ್ವಲ್ಪ ಕಡಿಮೆಯಾಗಿದೆಯೆಂದು ನಾನು ಭಾವಿಸುತ್ತೇನೆ. ನಾವು ಈಗ ಸರ್ವಾನುಮತದಿಂದ ಆಯ್ಕೆಯಾಗಿರುವ ಶ್ರೀ ಎನ್.ವೈ.ಗೋಪಾಲಕೃಷ್ಣ ಅವರು ಈ ಭಾಗದ ಎಲ್ಲಾ ಶಾಸಕರು ಎಲ್ಲಾ ರೀತಿಯ ಸಹಕಾರವನ್ನು ನೀಡುತ್ತೇವೆಂಬ ಭರವಸೆಯನ್ನು ಕೊಟ್ಟು ಆಡಳಿತ ಪಕ್ಷದ ಕಡೆಗೆ ಅವರು ಹೆಚ್ಚು ನೋಡದೆ ವಿರೋಧಪಕ್ಷದ ಕಡೆ ಹೆಚ್ಚು ಅವಕಾಶವನ್ನು ಕೊಟ್ಟು ಇದುವರೆಗೆ ನಡೆದು ಬಂದಿರುವ ಸತ್ಸಂಪ್ರದಾಯಗಳ ರೀತಿಯಲ್ಲಿ ಕಾರ್ಯಕಲಾಪ ನಿರ್ವಹಿಸುತ್ತಾರೆಂಬ ವಿಶ್ವಾಸ ನನಗಿದೆ. ಮುಖ್ಯಮಂತ್ರಿಗಳು ಗೋಪಾಲಕೃಷ್ಣ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಬೇಕೆಂದು ನಮ್ಮಲ್ಲಿ ಸಮಾಲೋಚಿಸಿದಾಗ ಒಂದು ಕ್ಷಣ ತಡ ಮಾಡದೆ ನಾವೆಲ್ಲಾ ಇದಕ್ಕೆ ಒಪ್ಪಿಕೊಂಡೆವು. ಏಕೆಂದರೆ ಈ ಸದನದ ಕಾರ್ಯಕಲಾಪ ಒಳ್ಳೆಯ ರೀತಿಯಲ್ಲಿ ನಡೆಯಬೇಕು. ಸ್ಪರ್ಧೆಗಾಗಿ ಸ್ಪರ್ಧೆಯನ್ನು ಮಾಡದೆ ಒಂದು ಸತ್ಸಂಪ್ರದಾಯವನ್ನು ಕಾಪಾಡಬೇಕು ಎನ್ನುವ ದೃಷ್ಟಿಯಿಂದ ಇವತ್ತು ಅವರನ್ನು ನಾವು ಸರ್ವಾನುಮತದಿಂದ ಆರಿಸಿದ್ದೇವೆ. ಅವರು ಈ ಹಿಂದೆ ಆ ಸ್ಥಾನದಲ್ಲಿ ಕುಳಿತು ಕೆಲಸ ಮಾಡಿರುವವರ ಅನುಭವವನ್ನು ಪಡೆದುಕೊಂಡು ಇಲ್ಲಿಯೂ ಸಹ ಪ್ರಭಾವಿಯಾಗಿ. ಯಶಸ್ವಿಯಾಗಿ ಕಾರ್ಯನಿರ್ವಹಿಸಲು ಶಕ್ತಿ ಅವರಿಗೆ ಭಗವಂತ ನೀಡಲೆಂದು ಹಾರೈಸಿ ಅವರು ಈ ಪೀಠಕ್ಕೆ ಆಯ್ಕೆಯಾಗಿರುವುದನ್ನು ಸ್ವಾಗತ ಮಾಡಿ. ಅವರಿಗೆ ಶುಭಕಾಮನೆಗಳನ್ನು ಕೋರುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಸಾರಿಗೆ ಮತ್ತು ಜಲಸಂಪನ್ಮೂಲ ಸಚಿವರು) : ಇಂದಿನ ದಿವಸ ಉಪ ಸಭಾಧ್ಯಕ್ಷರ ಸ್ಥಾನಕ್ಕೆ ಶ್ರೀಮಾನ್ ಎನ್.ವೈ.ಗೋಪಾಲಕೃಷ್ಣ ಅವರನ್ನು ಒಮ್ಮತದಿಂದ ನಾವು ಆರಿಸಿದ್ದೇವೆ. ಶ್ರೀ ಗೋಪಾಲಕೃಷ್ಣ ಅವರು ಮೂರನೇ ಬಾರಿ ವಿಧಾನಸಭೆಗೆ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ಬಹುಶಃ ನಮ್ಮ ಕಾಂಗ್ರೆಸ್ ಪಕ್ಷಕ್ಕೆ ಅವರಿಂದ ಒಂದು ಚಾಲನೆ ಸಿಕ್ಕಿತು. 1996 ರಲ್ಲಿ ಉಪ ಚುನಾವಣೆಯಲ್ಲಿ ಅವರು ಮೊದಲನೇ ಬಾರಿ ಗೆದ್ದು ಬಂದ ಮೇಲೆ ತದನಂತರ ಸುಮಾರು ಮೂರು-ನಾಲ್ಕು ಬಾರಿ ಉಪ ಚುನಾವಣೆಗಳನ್ನು ನಾವು ಗೆದ್ದು ಕೊನೆಗೆ ನಮಗೆ ಒಂದು recongnized opposition party ಸ್ಥಾನ ಸಿಗಲಿಕ್ಕೆ ಬಹುಶಃ ಪ್ರಪ್ರಥಮವಾಗಿ ಅವರ ಕಾಲ್ಗುಣ ಅಂತ ಹೇಳಿದರೆ ಅದು ತಪ್ಪಾಗಲಿಕ್ಕಿಲ್ಲ. ಅದರಲ್ಲಿಯೂ ಅವರು ವಿಶೇಷವಾಗಿ ಆಡಳಿತದಲ್ಲಿ ಕೂಡ ಹೆಚ್ಚಿನ ಅನುಭವವನ್ನು ಹೊಂದಿದ್ದಾರೆ. ಇಂಡಸ್ಟ್ರೀಸ್‌ಗೆ ಜಾಯಿಂಟ್ ಡೈರೆಕ್ಟರ್ ಆಗಿ ಕೆಲಸ ಮಾಡಿದ್ದಾರೆ. ಅಧ್ಯಕ್ಷರಾಗಿ ಆ ಇಂಡಸ್ಟ್ರೀಸ್ ಇಲಾಖಾ ಬೋರ್ಡ್‌ನಲ್ಲಿ ಕೆಲಸ ಮಾಡಿದ್ದಾರೆ. ವಿಧಾನಸಭೆಯ ಶಾಸಕರಾಗಿ ಮೂರು ಬಾರಿ ಆಯ್ಕೆ ಆಗಿದ್ದು ಸದನದಲ್ಲಿ ಬಹಳ ಗಂಭೀರವಾದ ಅವರ ನಡತೆಯನ್ನು ನಾವೆಲ್ಲಾ ನೋಡಿದ್ದೇವೆ. ಅವರು ಬಹಳ ಪ್ರಾಮಾಣಿಕತೆಯಿಂದ. ದಕ್ಷತೆಯಿಂದ ತಮ್ಮ ಕೆಲಸವನ್ನು ನಡೆಸಿಕೊಂಡು ಹೋಗತಕ್ಕ ಒಬ್ಬ ಪ್ರಾಮಾಣಿಕ ವ್ಯಕ್ತಿಯಾಗಿದ್ದು ಬಹಳ ಕಡಿಮೆ ಮಾತನಾಡುವವರಾಗಿದ್ದಾರೆ. ಆ ಸ್ಥಾನಕ್ಕೆ ಎಷ್ಟು ಕಡಿಮೆ ಮಾತನಾಡಿದರೂ ಒಳ್ಳೆಯದೆಂಬ ಭಾವನೆ ಎಲ್ಲರಿಗೂ ಕೂಡ ಇರುತ್ತದೆ. The Speaker who speaks less – ಅಂತ ಹೇಳತಕ್ಕಂತಹ ಗುಣಕ್ಕೆ ಅವರು ಅರ್ಹರಾಗಿದ್ದಾರೆ. ಇವತ್ತು ಅವರನ್ನು ಉಪ ಸಭಾಧ್ಯಕ್ಷರ ಸ್ಥಾನಕ್ಕೆ ಮಾನ್ಯ ಮುಖ್ಯಮಂತ್ರಿಗಳು ಹಾಗೂ ವಿಶೇಷವಾಗಿ ಎಲ್ಲಾ ಪಕ್ಷದ ಮುಖಂಡರು ಕೂಡ ಒಮ್ಮತದಿಂದ ಆಯ್ಕೆ ಮಾಡಿರುವುದನ್ನು ನಾನು ಹಾರ್ದಿಕವಾಗಿ ಅಭಿನಂದಿಸುತ್ತೇನೆ. ಅವರು ತಮ್ಮ ಇಲ್ಲಿಯವರೆಗಿನ ಅಂದರೆ ಎಂಟು ವರ್ಷದ ಅವಧಿಯಲ್ಲಿ ಸಾಕಷ್ಟು ಸಲ ಅವರು ಇಂಪಾರ್ಸಿಯಲ್ ಆಗಿ ನಡೆದುಕೊಳ್ಳುವುದನ್ನು ಅವರ ನಡವಳಿಕೆಯಲ್ಲಿ ನಾವೆಲ್ಲಾ ನೋಡಿದ್ದೇವೆ. ಮಾನ್ಯ ಯಡಿಯೂರಪ್ಪನವರು ಹೆಚ್ಚಿನ ಕಾಲಾವಕಾಶವನ್ನು ಅವರ ಕಡೆಗೆ ಕೊಡಬೇಕೆಂದು ಹೇಳಿದರು. ಹೆಚ್ಚಿನ ಕಾಲಾವಕಾಶವನ್ನು ಅವರು ಕೊಡಲಿ. ಕೊಡದಿರಲಿ. ಯಡಿಯೂರಪ್ಪನವರಂತೂ ಹೆಚ್ಚಿನ ಕಾಲಾವಕಾಶವನ್ನು ಪಡೆಯುತ್ತಾರೆ. ಆ ಮಾತು ಹಾಗಿರಲಿ. ಈಗ ಗೋಪಾಲಕೃಷ್ಣರವರು ಬಂದ ಮೇಲೆ ತಾವು ಕೂಡ ಹೆಚ್ಚಿನ ರೀತಿಯಲ್ಲಿ ವಿಶೇಷವಾಗಿ ಹೆಚ್ಚಿನ ಅಸಕ್ತಿಯನ್ನು ಆ ಕಡೆಗೆ

ತೋರಿಸುತ್ತೀರಿ. ಇದು ಪ್ರಜಾಪ್ರಭುತ್ವದಲ್ಲಿ ಸಹಜ. ಏಕೆಂದರೆ ಪ್ರಜಾಪ್ರಭುತ್ವದಲ್ಲಿ ನಮಗೆ ಸಲಹೆ ಕೊಟ್ಟು ಸಹಕರಿಸುವಂತಹುದು ಹಾಗೂ ಅನೇಕ ರೀತಿಯಲ್ಲಿ ನಮ್ಮನ್ನು ತಿದ್ದುವ ಹಕ್ಕು ಅವರಿಗೆ ಇದೆ. ಆ ಕೆಲಸವನ್ನು ಮಾಡುವಾಗ ಸ್ವಲ್ಪ ಹೆಚ್ಚಿನ ಸಮಯ ಬೇಕಾಗುತ್ತದೆ.

ಆದ್ದರಿಂದ ಆ ಒಂದು ದಿಕ್ಕಿನಲ್ಲಿ ಅವರು ಕೂಡ ಕೆಲಸ ಮಾಡುತ್ತಾರೆಂಬ ನಂಬಿಕೆ ನಮಗಿದೆ ಹಾಗಾಗಿ ನಾನು ಹೆಚ್ಚಿನ ವಿಷಯವನ್ನು ಪ್ರಸ್ತಾಪಿಸದೆ ಅವರಿಗೆ ಒಳ್ಳೆಯದಾಗಲಿ. ಇನ್ನು ಉನ್ನತವಾದಂತಹ ಅಧಿಕಾರ ಅವರಿಗೆ ಸಿಗಲಿ ಮತು ಅವರ ಅನುಭವದ ಲಾಭ ಕೂಡ ನಮಗೆ ದೊರೆಯಲಿ ಅಂತ ಈ ಸಂದರ್ಭದಲ್ಲಿ ಹಾರೈಸಿ ಮತ್ತೊಮ್ಮೆ ಅವರನ್ನು ಹಾರ್ದಿಕವಾಗಿ ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠಕ್ಕೆ ಬಂದರು)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ :– ಮಾನ್ಯ ಅಧ್ಯಕ್ಷರೇ ಗೆಳೆಯರಾದಂತಹ ಶ್ರೀ ಎನ್.ವೈ.ಗೋಪಾಲಕೃಷ್ಣರವರು ಉಪಾಧ್ಯಕ್ಷರಾಗಿ ಆಯ್ಕೆಯಾಗಿರತಕ್ಕಂಥಾದ್ದೂ ನನಗಂತೂ ವೈಯಕ್ತಿಕವಾಗಿ ಭಾರಿ ಸಂತೋಷವಾಗಿದೆ. ನನಗೆ ಅವರು 10 ವರ್ಷಗಳಿಂದ ಸ್ನೇಹಿತರು ಅವರು ಉಪಾಧ್ಯಕ್ಷರಾದಂತಹ ಸಂದರ್ಭ ಬಹಳ ಸೂಕ್ಷ್ಮವಾದಂತಹ ಸಂದರ್ಭ. ಮತ್ತು ಸಂಕೀರ್ಣವಾದಂತಹ ರಾಜಕೀಯ ವ್ಯವಸ್ಥೆ. ಒಂದು ಕಡೆ ಸಮ್ಮಿಶ್ರ ಸರ್ಕಾರ. ಇನ್ನೊಂದು ಕಡೆ ಅತಿ ಹೆಚ್ಚಿನ ಸಂಖ್ಯೆಯಲ್ಲಿರಂತಕ್ಕಂಥ ವಿರೋಧಪಕ್ಷಗಳು. ಬಹಳ ಸೂಕ್ಷ್ಮವಾಗಿ ಅವರು ಈ ಸಭೆಯ ಕಾರ್ಯಕಲಾಪಗಳನ್ನು ನಿರ್ವಹಿಸಬೇಕಾಗುತ್ತದೆ. ಏಕೆಂದರೆ ರಾಜಕೀಯವಾಗಿಯೂ ಕೂಡ ಬಹಳ ಸೂಕ್ಷ್ಮವಾಗಿರತಕ್ಕಂಥ ಒಂದು ಸಂದರ್ಭದಲ್ಲಿ ಅವರು ಆಯ್ಕೆಯಾಗಿದ್ದಾರೆ. ಎಲ್ಲಾ ವಿಭಾಗದ ಜನರನ್ನು ಎಲ್ಲಾ ಪಕ್ಷದವರನ್ನು ಕೂಡ ಸಮಾನ ರೀತಿಯಲ್ಲಿ ನೋಡಬೇಕಾಗಿದೆ. ಆದರೆ ಹೆಚ್ಚು ಅವರು ವಿರೋಧಪಕ್ಷದ ಕಡೆಗೆ ಗಮನ ಕೊಡಬೇಕಾಗುತ್ತದೆ. ಏಕೆಂದರೆ ಮಾನ್ಯ ಖರ್ಗೆಯವರು ಹೇಳಿದಂತೆ ನಾನು ಮಾತನಾಡುವುದಷ್ಟೇ ಕೊಟ್ಟಿರುವುದು. ಅಧಿಕಾರ ಎಲ್ಲಾ ನಿಮಗೆ ಕೊಟ್ಟಿದ್ದಾರೆ. ಆದ್ದರಿಂದ ತಾವು ಹೆಚ್ಚು ಮಾತನಾಡುವ ಅವಶ್ಯಕತೆ ಇಲ್ಲ. ನಾವು ಬರೀ ಮಾತನಾಡುವುದು ಅಷ್ಟೆ. ಅಧಿಕಾರ ಎಲ್ಲಾ ನಿಮ್ಮ ಕೈಯಲ್ಲಿಯೇ ಇದೆ. ಹಾಗಾಗಿ ನಾವು ಮಾತನಾಡುವುದಕ್ಕಾದರೂ ಕೊಡಿ. ಉಳಿದಿದ್ದನ್ನು ಎಲ್ಲಾ ನೀವೇ ಇಟ್ಟುಕೊಳ್ಳಿ.

ಹಾಗಾಗಿ ನಮ್ಮ ಕಡೆ ಹೆಚ್ಚು ಗಮನ ಕೊಡಬೇಕಾಗಿರುವುದು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಬಹಳ ಅನಿವಾರ್ಯತೆ ಮತ್ತು ಅವಶ್ಯಕತೆ ಇದೆ. ಏಕೆಂದರೆ ವಿರೋಧಪಕ್ಷಗಳು ತಮ್ಮ ಜವಾಬ್ದಾರಿಯನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಿದಾಗ ಮಾತ್ರವೇ ಪ್ರಜಾತಂತ್ರ ವ್ಯವಸ್ಥೆ ಗಟ್ಟಿಯಾಗಿರುವುದಕ್ಕೆ ಸಾಧ್ಯವಾಗುತ್ತದೆ. ವಿರೋಧಪಕ್ಷಗಳು ಬಲಹೀನವಾದರೆ ಪ್ರಜಾತಂತ್ರ ವ್ಯವಸ್ಥೆ ಗಟ್ಟಿಯಾಗುವುದಕ್ಕೆ ಸಾಧ್ಯವಿಲ್ಲ. ಆಗಂತ ಹೇಳಿ ಯಾವಾಗಲೂ ಸಂಘರ್ಷದ ಹಾದಿಯನ್ನು ಹಿಡಿಯುತಕ್ಕಂಥಾದ್ದರಲ್ಲಿಯೂ ಏನೂ ಪ್ರಯೋಜನವಾಗುವುದಿಲ್ಲ. ಆ ರೀತಿ ಇರತಕ್ಕಂಥ ಈ ಸಂದರ್ಭದಲ್ಲಿ ಗೆಳೆಯರು ಮತ್ತು ಸಜ್ಜನಿಕೆಯ ವ್ಯಕ್ತಿ ಅವರು. ಈಗ ನಮಗೆ ಅಧ್ಯಕ್ಷರು ಸಹ ಬಹಳ ಸಜ್ಜನಿಕೆಯಿಂದ ಕೂಡಿರತಕ್ಕಂಥ ವ್ಯಕ್ತಿ. ಉಪಾಧ್ಯಕ್ಷರು ಬಹಳ ಸಜ್ಜನಿಕೆಯಿಂದ ಕೂಡಿರತಕ್ಕಂಥವರು. ಇಬ್ಬರು ಬಹಳ ಒಳ್ಳೆಯ ಕಾಮಿನೇಶನ್ ಅವರದು. ಹಾಗಾಗಿ ಈ ಸದನಕ್ಕೆ ಹೆಚ್ಚು ಗೌರವವನ್ನು ತಂದು ಕೊಡುತ್ತಾರೆ. ಮತ್ತು ಚರ್ಚೆ ಕಾರ್ಯಕಲಾಪಗಳು ಉನ್ನತ ರೀತಿಯಲ್ಲಿ ಮತ್ತು ಉತ್ತಮ ರೀತಿಯಲ್ಲಿ ಚರ್ಚೆಯಾಗಲಿಕ್ಕೆ ಅವಕಾಶ ಮಾಡಿಕೊಡುತ್ತಾರೆ. ಹೆಚ್ಚು ಅರ್ಥಪೂರ್ಣವಾದಂತಹ ವಿಮರ್ಶಾತ್ಮಕವಾದಂತಹ ಚರ್ಚೆಗಳಿಗೆ ಅನುಕೂಲ ಮಾಡಿಕೊಡಲಿ ಮತ್ತು ಜನರ ಪರವಾಗಿ ಸಮಸ್ಯೆಗಳು ಬಂದಂತಹ ಸಂದರ್ಭಗಳಲ್ಲಿ ಅವರೂ ಜನರ ಪರವಾಗಿಯೇ ಇರಬೇಕು ಅಂತ ಹೇಳಿ ವಿನಂತಿಸಿ ಅವರಿಗೆ ಮತ್ತೊಮ್ಮೆ ನಾವೆಲ್ಲರೂ ಸೇರಿ ಸರ್ವಾನುಮತದಿಂದ ಆಯ್ಕೆ ಮಾಡಿದ್ದೇವೆ. ಅವರಿಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಡಿ.ಕೆ.ಶಿವಕುಮಾರ್:– ಮಾನ್ಯ ಅಧ್ಯಕ್ಷರೇ ತಮ್ಮ ಆಯ್ಕೆ ಏನು ಇದೆ ನನಗೆ ಈ ಆಯ್ಕೆಯಲ್ಲಿ ಇವತ್ತು ನಿಮ್ಮನ್ನು ಸೂಚಿಸುವ ಸೌಭಾಗ್ಯ ಏನು ನನಗೆ ಲಭಿಸಿದೆ ನಿಜವಾಗಿಯೂ ಕೂಡ ನನಗೆ ವೈಯಕ್ತಿಕವಾಗಿಯೂ ಕೂಡ ಬಹಳ ಸಂತೋಷವನ್ನುಂಟು ಮಾಡಿದೆ. ನಾನು 1996ನೇ ಇಸವಿಯ ದಿನಗಳನ್ನು ನೆನಪು ಮಾಡಿಕೊಳ್ಳುವಂತಹ ಪರಿಸ್ಥಿತಿಯಲ್ಲಿದ್ದೇನೆ. ಹಿಂದೆ ಮಾನ್ಯ ಧರ್ಮಸಿಂಗ್‌ರವರು ಪ್ರದೇಶ ಕಾಂಗ್ರೇಸ್ ಅಧ್ಯಕ್ಷರಾಗಿದ್ದಾಗ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ವಿರೋಧಪಕ್ಷದ ನಾಯಕರಾಗಿದ್ದಾಗ ಬೈ ಎಲೆಕ್ಷನ್ ಬಂತು. ಬಂದಾಗ ನನ್ನನ್ನೇ ನಾನು ಧರ್ಮಸಿಂಗ್‌ರವರ ಕೆಳಗಡೆ ಪ್ರಧಾನ ಕಾರ್ಯದರ್ಶಿಯಾಗಿ ಪಕ್ಷದಲ್ಲಿ ಕೆಲಸ ಮಾಡುತ್ತಿದ್ದೆ. ಮೊಳಕಾಲ್ಮೂರಿಗೆ ಯಾರಿಗೆ ಟಿಕೆಟ್ ಕೊಡಬೇಕು ಅಂತ ಹೇಳಿ. ಅಷ್ಟರಲ್ಲಿಯೇ ರಾಮನಗರ ಬೈ ಎಲೆಕ್ಷನ್ ಚುನಾವಣೆ ನಡೆದು ಒಂದು 15 ದಿನ ಆಗಿತ್ತು. ಯಾರಿಗೆ ಈ ಚುನಾವಣೆಯಲ್ಲಿ ಟಿಕೆಟ್ ಕೊಡಬೇಕು ಅಂತ ಹೇಳಿ ನನ್ನನ್ನು ಮತ್ತು ಶ್ರೀ ಅಲ್ಲೂರಿ ವೀರಭದ್ರಪ್ಪನವರನ್ನು ಕಳುಹಿಸಿಕೊಟ್ಟಿದ್ದರು. ನಾವಿಬ್ಬರೂ

ಹೋಗಿ ಎರಡು ಮೂರು ದಿನಗಳ ಕಾಲ ಮೊಳಕಾಲ್ಮೂರುನಲ್ಲಿ ಇದ್ದು ಸುಮಾರು ಹತ್ತಾರು ಸಾವಿರ ಕಾರ್ಯಕರ್ತರನ್ನು ಜನರನ್ನು ಭೇಟಿ ಮಾಡಿ ಅವತ್ತಿನ ಜನರ ಸಂಪರ್ಕವನ್ನು ಮಾಡಿ ಅವತ್ತು ಜನರ ಅಭಿಪ್ರಾಯವನ್ನು ನೇರವಾಗಿ ಅಧ್ಯಕ್ಷರಿಗೆ ಅವತ್ತು ಇದ್ದಂತಹ ಧರ್ಮಸಿಂಗ್‌ರವರಿಗೆ ನಾವು ತಿಳಿಸಿದೆವು. ಬಹಳ ಜನ ಮುಖಂಡರುಗಳು ನಮ್ಮ ಕಾಂಗ್ರೇಸ್ಸ್ ಪಕ್ಷದ ಮುಖಂಡರುಗಳು ಮತ್ತು ರಾಜ್ಯದ ಅನೇಕ ಜನ ಮುಖಂಡರುಗಳು ಇಂಡಿಪೆಂಡೆಟ್ ಆಗಿ ತಾವು ನಿಂತಿದ್ದೀರಿ. ನನ್ನೂರಿಗೆ ಇಂಡಿಪೆಂಡೆಟ್ ಆಗಿ ನಿಂತಿದ್ದಿರಿ ನಾನು ಗೆದ್ದೆ ನೀವು ಸೋತಿದ್ದೀರಿ. ಟಿಕೆಟ್ ಕೊಡಬಾರದು ರೆಬಲ್ ಆಗಿ ನಿಂತವರಿಗೆ ಅವಕಾಶ ಸಿಗಬಾರದು ಎನ್ನುವುದು ಬೇಕಾದಷ್ಟು ವಾದ ವಿವಾದಗಳು ಇದ್ದರೂ ಕೂಡ ಅವತ್ತು ಧರ್ಮಸಿಂಗ್ ಸಾಹೇಬರು ದೊಡ್ಡ ಮನಸ್ಸು ಮಾಡಿ ನಾವೇನು ಒಂದು ವರದಿ ಕೊಟ್ಟಿದ್ದೆವೋ ಆ ವರದಿ ಪ್ರಕಾರ ತಮಗೆ ಟಿಕೆಟ್ ಕೊಟ್ಟು ತಾವು ಆಯ್ಕೆಯಾದ ಮೇಲೆ ಅಲ್ಲಿಂದ ಇಲ್ಲಿಯವರೆಗೂ ಕೂಡ ವಿಧಾನ ಸಭೆಗೆ ಸತತವಾಗಿ ಮೂರು ಸಂದರ್ಭದಲ್ಲಿ ತಾವು ಆಯ್ಕೆಯಾಗಿ ಬಂದು ತಮ್ಮ ಕ್ಷೇತ್ರದ ಜನರಲ್ಲಿ ಏನು ವಿಶ್ವಾಸ ಇದೆ ಪ್ರೀತಿ ಇದೆ ಜನರಲ್ಲಿ ಯಾವ ರೀತಿ ನಂಬಿಕೆಯನ್ನು ಉಳಿಸಿಕೊಂಡು ಬಂದಿದ್ದೀರಿ ಅಂತ ಹೇಳಿ ನಿಮ್ಮ ಮೂರು ಸತತವಾದಂತಹ ಗೆಲುವು ಬಹಳ ಅರ್ಥಪೂರ್ಣವಾಗಿ ಇದೆ. ತಾವು ಬಹಳ ದೊಡ್ಡ ಜವಾಬ್ದಾರಿ ಸ್ಥಾನದಲ್ಲಿ ಕುಳಿತ್ತಿದ್ದೀರಿ. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಈ ಶಾಸಕಾಂಗ ನ್ಯಾಯಾಂಗ, ಕಾರ್ಯಾಂಗ, ಪತ್ರಿಕಾರಂಗ ಇವೆಲ್ಲಾ ಪಿಲ್ಲರಗಳು ಅಂದುಕೊಂಡು ನಾವು ಕೆಲಸ ಮಾಡುತ್ತಿದ್ದೇವೆ. ನೀವು ಶಾಸಕಾಂಗದಲ್ಲಿ ಕೆಲಸ ಮಾಡುವುದರ ಜೊತೆಗೆ ನೀವು ನ್ಯಾಯಾಂಗ ಸ್ಥಾನದಲ್ಲೂ ಕುಳಿತುಕೊಳ್ಳುವಂತಹ ಒಂದು ಅವಕಾಶ ತಮಗೆ ಇದೆ ಇದ್ದೀರಿ. ನಮ್ಮ ವಿರೋಧಪಕ್ಷದ ಸ್ನೇಹಿತರು ನಮ್ಮ ಕಡೆಗೆ ತಾವು ಹೆಚ್ಚು ವಾಲಬೇಕು ಅಂತ ಹೇಳಿ ಪಾಪ ಯಡಿಯೂರಪ್ಪನವರು ಮತ್ತು ಇನ್ನೂ ಅನೇಕ ಜನ ನಮ್ಮ ಸ್ನೇಹಿತರುಗಳು ಹೇಳುತ್ತಿದ್ದಾರೆ. ಇವತ್ತು ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಹೌಸ್ ಆಫ್ ಕಾಮೆನ್ಸ್ ನಲ್ಲೂ ಕೂಡ ನಾವು ನೋಡಿದ್ದೇವೆ ಅಲ್ಲೂ ಕೂಡ ಡೆಪ್ಯೂಟಿ ಸ್ಪೀಕರ್‌ಗೆ ವಿರೋಧಪಕ್ಷದ ನಾಯಕರ ಪಕ್ಕದಲ್ಲಿಯೇ ಸ್ಥಾನಮಾನ ದೊರಕಿಸಿದ್ದಾರೆ. ಬಹುಶಃ ಅವರು ಹಾಕಿದಂತಹ ಸಂಪ್ರದಾಯವನ್ನು ನಾವೆಲ್ಲಾ ಪಾಲಿಸಿಕೊಂಡು ಬರುತ್ತಿದ್ದೇವೆ. ಆದರೆ ಮಾನ್ಯ ಖರ್ಗೆ ಸಾಹೇಬರು ಹೇಳಿದಂತೆ ಏನು ಸರ್ಕಾರದ ಪರವಾಗಿದ್ದರೂ ಕೂಡ ವಿರುದ್ದವಾಗಿ ಜನರ ವಿಚಾರಗಳನ್ನು ತಿಳಿಸುವುದಕ್ಕೆ ಒಂದು ವಿರೋಧಪಕ್ಷದವರಿಗೆ ಒಂದು ಅವಕಾಶ ಸಿಗುತ್ತದೆ. ಆದರೆ ಮಾನ್ಯ ಯಡಿಯೂರಪ್ಪನವರು ತಮ್ಮ ಪಕ್ಕದಲ್ಲಿ

ಕುಳಿತುಕೊಂಡು ಕಿವಿಗೆ ಜಾಸ್ತಿ ಉದುವುದಿಲ್ಲ ಎನ್ನುವ ನಂಬಿಕೆ ನನಗೆ ಇದೆ ಅವರು ಯಾವ ಡೆಪ್ಯುಟಿ ಸ್ಪೀಕರಗೂ ಜಾಸ್ತಿ ತೊಂದರೆ ಕೊಡಲಿಲ್ಲ. ಆದರೆ ತಮ್ಮಿಂದ ದೊಡ್ಡ ಜವಾಬ್ದಾರಿ ಈ ರಾಜ್ಯದಲ್ಲಿ ತಾವು ಬರೀ ಡೆಪ್ಯುಟಿ ಸ್ಪೀಕರ್ ಆಗಿದ್ದೀರಿ ತಾವು ನ್ಯಾಯಂಗಕ್ಕೆ ಒಳಗಾಗಿದ್ದೀರಿ ಎನ್ನುವ ಪ್ರಶ್ನೆಯಲ್ಲ ಇನು ರಾಜ್ಯದಲ್ಲಿ ದೊಡ್ಡ ದೊಡ್ಡ ಹುದ್ದೆಗಳು ನಿಮಗೆ ದೊರೆಯಲಿಂತ ಹೇಳಿ ನಾವು ಭಗವಂತನಲ್ಲಿ ಪ್ರಾರ್ಥನೆ ಮಾಡಿಕೊಂಡು ಆಡಳಿತ ಪಕ್ಷದ ಸದಸ್ಯರಾಗಿ ಜೊತೆಗೆ ನಿಮ್ಮ ಒಬ್ಬ ಆಪ್ತ ಮಿತ್ರರಾಗಿ ಇನ್ನೂ ಹೆಚ್ಚಿನ ಸ್ಥಾನಮಾನ ದೊರೆಯಲಿ ತಮ್ಮಿಂದ ಈ ರಾಜ್ಯಕ್ಕೆ ಈ ಒಂದು ಮನೆಗೂ ಕೂಡ ಉತ್ತಮವಾದ ಸೇವೆ ದೊರೆಯಲಿ ಅಂತ ಹೇಳಿ ಭಗವಂತನಲ್ಲಿ ಪ್ರಾರ್ಥನೆ ಮಾಡಿಕೊಂಡು ತಮಗೆ ಅಭಿನಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ :– ಮಾನ್ಯ ಉಪಾಧ್ಯಕ್ಷರೇ. ತಮಗೆ ಇವತ್ತು ಡೆಪ್ಯುಟಿ ಸ್ಪೀಕರ್ ಆಗಿ ಸರ್ವಾನುಮತದಿಂದ ಆಯ್ಕೆಯಾದ ಸಂದರ್ಭದಲ್ಲಿ ಅಭಿನಂದನೆಗಳನ್ನು ಸಲ್ಲಿಸುತ್ತಾ. ಬಹಳ ಸೌಮ್ಯ ಸ್ವಭಾವದ ಎಲ್ಲರ ಜೊತೆ ಹೊಂದಾಣಿಕೆಯನ್ನು ಮಾಡಿಕೊಂಡು ಹೋಗುವಂತಹ ಮನೋಭಾವ ತಮ್ಮದು. ನಮ್ಮೊಂದಿಗೆ ಮೂರನೇ ಭಾರಿ ಈ ಸದನಕ್ಕೆ ಬಂದಿದ್ದೀರಿ. ತಾವು ಯಾವ ರೀತಿಯಲ್ಲಿ ಆಯ್ಕೆಯಾದಿರಿ. ಈ ಸದನಕ್ಕೆ ಬರುವುದಕ್ಕೆ ಅವಕಾಶ ಹೇಗೆ ಆಯಿತು ಎನ್ನುವುದನ್ನು ಮಾನ್ಯ ಶಿವಕುಮಾರ್ ಅವರು ಹೇಳಿದ್ದಾರೆ. ಆದರೆ ಆ ಸ್ಥಾನದಲ್ಲಿ ಹಿಂದೆ ಅನೇಕ ಮಂದಿ ಅಧ್ಯಕ್ಷರುಗಳು. ಉಪಾಧ್ಯಕ್ಷರುಗಳು ಯಾವ ಒಂದು ಸಂಪ್ರದಾಯವನ್ನು ಹಾಕಿಕೊಂಡಿದ್ದಾರೆ. ವಿರೋಧಪಕ್ಷಗಳಿಗೆ ಹೆಚ್ಚಿನ ಅವಕಾಶವನ್ನು ಕೊಡಿ ಎನ್ನುವುದರ ಜೊತೆಗೆ ತಾವು ತೀರ್ಮಾನವನ್ನು ತೆಗೆದುಕೊಳ್ಳುವಾಗ ತಾವು ಒಂದು ನ್ಯಾಯ ಪೀಠದಲ್ಲಿ ಕುಳಿತುಕೊಂಡು ಎಲ್ಲರನ್ನೂ ಸಮನಾಗಿ ಕಾಣುವಂತಾದ್ದು ಆ ಒಂದು ತೀರ್ಮಾನ ತೆಗೆದುಕೊಳ್ಳುವಂತಹ ಸಂದರ್ಭದಲ್ಲಿ ಮಾಡಬೇಕು ಅಂತ ಹೇಳುತ್ತಾ ಮಾನ್ಯ ಅಧ್ಯಕರು ಯಾವ ರೀತಿ ಇಷ್ಟು ದಿವಸಗಳ ಕಾಲ ಒಳ್ಳೆಯ ಸಂಪ್ರದಾಯವನ್ನು ಹಾಕಿಕೊಂಡು ಬಂದಿದ್ದಾರೆ ಆ ಸಂಪ್ರದಾಯವನ್ನು ಮುಂದುವರೆಸಿಕೊಂಡು ಹೋಗಬೇಕು ತಾವು ಬಂದಂತಹ ಹಿನ್ನೆಲೆಯ ಬಗ್ಗೆ ಮಾನ್ಯ ಖರ್ಗೆಯವರು ಹೇಳಿದರು. ನನಗೂ ಸ್ವಲ್ಪ ತಮ್ಮ ಹಿನ್ನೆಲೆ ಬಗ್ಗೆ ಮಾಹಿತಿ ಇದೆ. ನ್ಯಾಯಂಗದ ಒಂದು ಸಂಪರ್ಕವೂ ಇದೆ. ಕಾರ್ಯಾಂಗದಲ್ಲಿ ತಾವು ಇದ್ದವರು. ನ್ಯಾಯಾಂಗ ಮತ್ತು ಕಾರ್ಯಾಂಗವಾಗಿ ಒಂದು ಪೀಠದಲ್ಲಿ ಕುಳಿತುಕೊಳ್ಳುವಂತಹ ಒಂದು ಅವಕಾಶ ಸಿಕ್ಕಿದ್ದರಿಂದ ಇನ್ನೂ ಒಳ್ಳೆಯ ರೀತಿಯಲ್ಲಿ ಈ ಸದನವನ್ನು ನಡೆಸಿಕೊಂಡು ಹೋಗುವಂತಹ ಒಂದು ಅನುಭವ ತಮ್ಮಲ್ಲಿದೆ. ಆದ್ದರಿಂದ ತಾವು ಈ ಸದನವನ್ನು

ಒಳ್ಳೆಯ ರೀತಿಯಲ್ಲಿ ನಡೆಸಿಕೊಂಡು ಹೋಗಲಿಕ್ಕೆ ತಮ್ಮೆಲ್ಲರ ಸಹಕಾರ ತಮಗೆ ಇರುತ್ತದೆ. ತಾವು ಒಳ್ಳೆಯ ರೀತಿಯಲ್ಲಿ ನಡೆಸಿಕೊಂಡು ಹೋಗಿ ಈ ಮುಂದಿನ ದಿನಗಳಲ್ಲಿ ತಮಗೆ ಇನ್ನೂ ಉನ್ನತ ಹುದ್ದೆಗಳು ಸಿಗಲಿ ಎಂದು ಹಾರೈಸಿ ತಮಗೆ ಅಭಿನಂದನೆಗಳೊಟ್ಟಿಗೆ ಶುಭವನ್ನು ಕೋರಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್ ಕೆ ಪಾಟೀಲ್ :– (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಉಪಾಧ್ಯಕ್ಷರೇ ತಮ್ಮ ಆಯ್ಕೆ ಸದನದ ಸರ್ವರಿಗೂ ಸಹ ಬಹಳಷ್ಟು ಸಂತೋಷ ತಂದಿದೆ. ತಾವು 19ನೇ ಉಪಾಧ್ಯಕ್ಷರಾಗಿ ಈ ಸದನದ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದೀರಿ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು. ಮಾನ್ಯ ಜಲಸಂಪನ್ಮೂಲ ಸಚಿವರು. ವಿರೋಧಪಕ್ಷದ ಗಣ್ಯರು. ವಿರೋಧಪಕ್ಷದ ನಾಯಕರು ಏನು ತಮ್ಮ ಬಗ್ಗೆ ಅಭಿಪ್ರಾಯ ವ್ಯಕ್ತ ಮಾಡಿದರು ಅದು ತಮ್ಮ ವ್ಯಕ್ತಿಗತವಾಗಿರತಕ್ಕಂಥ ಒಂದು ಬಹು ದೊಡ್ಡ ಸಾಧನೆ ಅಂತ ನಾನು ಭಾವಿಸುತ್ತೇನೆ. ತಮ್ಮ ಮೃದು ಸ್ವಭಾವ ನಿಜವಾಗಿಯೂ ನಮ್ಮೆಲ್ಲರನ್ನೂ ಅದರ ಮೂಲಕ ಗೆದ್ದುಕೊಂಡಿದ್ದೀರಿ. ತಾವು ಕೆಎಚ್‌ಡಿಸಿ ಛೇರ್ಮನರಾಗಿದ್ದಾಗ ಮಾಡಿರುವ ಕೆಲಸ ಆ ಪ್ರೊಫೆಶನಲ್ ಅಪ್ರೋಚ್ ಏನು ಕೊಡಬೇಕು ಅಂತ ಪ್ರಯತ್ನ ಮಾಡಿದಿರಿ ನೇಕಾರರಿಗೆ ಅನುಕೂಲ ಮಾಡಬೇಕು ಅಂತ ಏನು ತಾವು ಹೋರಾಟ ಮಾಡುತ್ತಾ ಇದ್ದೀರಿ ಅದು ನೀವು ಬಡವರ ಬಗೆಗೆ ಹೊಂದಿರುವ ಕಳಕಳಿಯನ್ನು ತೋರಿಸುತ್ತದೆ. ಈ ನಿಮ್ಮ ಮನಸ್ಸು ನಿಮ್ಮ ಕಾಳಜಿ ಅದರ ಮೂಲಕ ಇವತ್ತು ತಮಗೆ ದೊರೆತಿರತಕ್ಕಂತಹ ಸ್ಥಾನಮಾನ ಏನಿದೆ. ನನಗೊಮ್ಮೊಮ್ಮೆ ಅನಿಸುತ್ತದೆ ಸನ್ಮಾನ್ಯ ಮುಖ್ಯಮಂತ್ರಿಗಳು ಆಯ್ಕೆ ಮಾಡುವಾಗ ಬಹಳಷ್ಟು ವಿಚಾರ ಮಾಡಿ ಆಯ್ಕೆ ಮಾಡಿದ್ದಾರೆ. ತಮ್ಮ ಮೃದು ಸ್ವಭಾವದ ಜೊತೆಗೆ ಒಮ್ಮೊಮ್ಮೆ ಸಿಟ್ಟಿಗೇಳುತ್ತಿರುತ್ತೀರಿ ನೀವು. ಬಹುಶಃ ಆ ತರಹ ಸಿಟ್ಟಿಗೇಳದಿರುವಂತೆ ಯಾವುದಾದರೂ ಸ್ಥಾನದಲ್ಲಿ ಕೂರಿಸಿದರೆ ನಿಮ್ಮಿಂದ ಆ ಸಿಟ್ಟು ಮರೆಯಾಗಿ ಹೋಗುತ್ತದೆ. ಆ ರೀತಿ ಆ ಸಿಟ್ಟು ಮರೆವು ಮಾಡಿಸುವುದಕ್ಕೆಂದೇ ಆ ಜವಬ್ದಾರಿ ಸ್ಥಾನವನ್ನು ತಮಗೆ ನಮ್ಮ ಸಭಾನಾಯಕರು ಕೊಡಿಸಿದ್ದಾರೆ ಅಂತ ನಾನಂತೂ ವೈಯಕ್ತಿಕವಾಗಿ ಭಾವಿಸಿಕೊಳ್ಳುತ್ತೇನೆ. ಎ ಆರ್ ಪಂಚಗಾವಿಯಂತಹ ಗಾಂಧೀವಾದಿ ಕೂತಿದ್ದ ಸ್ಥಾನ ಅದು. ಅಂಥ ಸ್ಥಾನಕ್ಕೆ ತಾವು ವಿಶೇಷ ಮೆರುಗು ತರುವ ರೀತಿಯಲ್ಲಿ ಈ ಸದನದ ಇತಿಹಾಸ ಏನಿದೆ ಆ ಇತಿಹಾಸವನ್ನು ಮೆಲುಕು ಹಾಕಿ ಈ ಸದನದ ಘನತೆಗೌರವವನ್ನು ಎತ್ತರಿಸುವಂತಹ ದೊಡ್ಡ ಕಾರ್ಯ ನಿರ್ವಹಣೆ ತಮ್ಮಿಂದ ಆಗುತ್ತದೆ

ಎಂಬ ವಿಶ್ವಾಸ ಹಾಗೂ ಆ ರೀತಿ ಆಗಲಿ ಎಂದು ಹಾರೈಸಿ ಮತ್ತೊಮ್ಮೆ ಏನು ಎಲ್ಲರೂ ತಮಗೆ ಈ ಸಂದರ್ಭದಲ್ಲಿ ಶುಭ ಕೋರಿದರು. ಅಭಿನಂದನೆ ಮಾಡಿದರು. ಅವರೆಲ್ಲರ ಜೊತೆಗೆ ನಾನು ಧ್ವನಿಗೂಡಿಸುತ್ತೇನೆ.

ಶ್ರೀ ಸಿದ್ದರಾಮಯ್ಯ (ಮಾನ್ಯ ಉಪ ಮುಖ್ಯಮಂತ್ರಿಗಳು) : ಅಧ್ಯಕ್ಷರೇ ಮೊದಲಿಗೆ ನಿಮಗೆ ನನ್ನ ಹೃತ್ಪೂರ್ವಕ ಅಭಿನಂದನೆ ಸಲ್ಲಿಸುತ್ತೇನೆ. ಉಪಾಧ್ಯಕ್ಷರ ಸ್ಥಾನ ಕೂಡ ಅಧ್ಯಕ್ಷರ ಸ್ಥಾನದಷ್ಟೇ ಬಹಳ ಜವಾಬ್ದಾರಿಯುತವಾದ ಸ್ಥಾನ. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಆಳುವ ಮತ್ತು ವಿರೋಧ ಪಕ್ಷಗಳು ಇಲ್ಲಿ ಜನರ ಸಮಸ್ಯೆಗಳನ್ನು ಚರ್ಚೆ ಮಾಡಿ ಪರಿಹರಿಸುವ ಸಲುವಾಗಿ ಪಾರ್ಲಿಮೆಂಟರಿ ವ್ಯವಸ್ಥೆಯಲ್ಲಿ ಬಹಳ ಉನ್ನತವಾದ ಜಾಗ ಅದು. ಆ ಸ್ಥಾನದಲ್ಲಿ ಕೂತವರು ಬಹಳ ಕಡಿಮೆ ಮಾತನಾಡಬೇಕು. ಇಲ್ಲಿ ಹೆಚ್ಚು ಮಾತನಾಡುವುದಿರುತ್ತದೆ. ಸ್ವಭಾವತಃ ನೀವು ಕಡಿಮೆ ಮಾತನಾಡತಕ್ಕಂತಹವರು ಮತ್ತೆ ಸೌಜನ್ಯ ಇರತಕ್ಕಂತಹವರು ಮತ್ತೆ ಮೆದುಸ್ವಭಾವದವರು. ಅಧ್ಯಕ್ಷರು ಕೂಡ ಅದೇ ತರಹ ಇದ್ದಾರೆ. ನಾವು ಆಯ್ಕೆ ಮಾಡುವಾಗಲೂ ಅಧ್ಯಕ್ಷರು ಈ ಸ್ಥಾನಕ್ಕೆ ಸೂಕ್ತವಾಗುತ್ತಾರೆ ಅಂತಲೇ ನೀವು ಕೂಡ ಅದೇ ರೀತಿ ಒಂದು ತರಹ ಮಾಡೆಲ್ ಅಧ್ಯಕ್ಷರು ಉಪಾಧ್ಯಕ್ಷರ ತರಹ ಇದ್ದೀರಿ. ಒಂದೊಂದ್ಸಾರಿ ಜೋರೂ ಮಾಡಬೇಕಾಗುತ್ತದೆ. ಸದನವನ್ನು ಸರಿದಾರಿಗೆ ತರಬೇಕಾದರೆ ಚರ್ಚೆಯನ್ನು ಸರಿಯಾದ ದಾರಿಯಲ್ಲಿ ಕೊಂಡೊಯ್ಯಲು ಅದಕ್ಕೆ ಮಾರ್ಗದರ್ಶನ ನೀಡಬೇಕಾದರೆ ಒಂದೊಂದ್ಸಾರಿ ಕೋಪಾನೂ ಬೇಕಾಗುತ್ತದೆ. ನಮ್ಮ ಸಭಾಧ್ಯಕ್ಷರನ್ನು ನೋಡಿದ ಮೇಲೆ ನಿಮಗೂ ಕೂಡ ಆ ತರಹ ಪ್ರವೃತ್ತಿ ಇದೆ ಎಂದು ನಾನು ಅಂದು ಕೊಂಡಿದ್ದೇನೆ. ಈ ಕರ್ನಾಟಕ ವಿಧಾನಸಭೆಗೆ ಭವ್ಯ ಪರಂಪರೆ ಇತಿಹಾಸ ಇದೆ ಅಲ್ಲೂ ಕೆಲಸ ಮಾಡಿದವರು ಆ ಸ್ಥಾನದ ಗೌರವ ಗಾಂಭೀರ್ಯ ಘನತೆಯನ್ನು ಎತ್ತಿಹಿಡಿಯುವಂತಹ ಕೆಲಸಗಳನ್ನು ಮಾಡಿಕೊಂಡು ಬಂದಿದ್ದಾರೆ. ಅಂತಹ ಒಂದು ಇತಿಹಾಸ ಕರ್ನಾಟಕ ವಿಧಾನಸಭೆ ಇತಿಹಾಸದಲ್ಲಿ ನಿರ್ಮಾಣವಾಗಿದೆ. ಹಾಗಾಗಿ ಅದನ್ನು ಎತ್ತಿಹಿಡಿಯುವ ಶಕ್ತಿ ಸಾಮರ್ಥ್ಯ ಎಲ್ಲ ಕೂಡ ನಿಮಗೆ ಇದ್ದಾವೆ ಅಂತ ನಾನು ಭಾವಿಸಿಕೊಂಡಿದ್ದೇನೆ. ಏಕೆಂದರೆ ನೀವಲ್ಲಿ ಕೂತುಕೊಂಡ ಮೇಲೆ ಯಾವುದೇ ಪಕ್ಷಕ್ಕೆ ಸೇರಿದರಲ್ಲಾ. ಪಕ್ಷಾತೀತವಾಗಿ ಕೆಲಸ ಮಾಡಬೇಕು. ಬಹಳ ಮುಖ್ಯವಾಗಿ ಯಾವ ಪಕ್ಷಕ್ಕೆ ಸೇರಿದರೂ. ಪಕ್ಷಾತೀತವಾಗಿದ್ದಾರೆ ಎಂಬುದಕ್ಕಿಂತ ಹೆಚ್ಚಾಗಿ ಇಲ್ಲಿ ಚರ್ಚೆಯನ್ನು ಎತ್ತರಕ್ಕೆ ಕೊಂಡೊಯ್ಯುವ. ಅದಕ್ಕೆ ಮಾರ್ಗದರ್ಶನ ಮಾಡುವಂತಹ ಜನರ ಸಮಸ್ಯೆಗಳನ್ನು ಚರ್ಚೆ ಮಾಡಲಿಕ್ಕೆ ಹೆಚ್ಚು ಕಾಲ ಕೊಡುವುದು ಬಹಳ ಮುಖ್ಯ. ನಾವೆಲ್ಲ ಇಲ್ಲಿ ಬಂದಿರುವುದು ಈ ರಾಜ್ಯದ ಜನತೆಯ ಸಮಸ್ಯೆಗಳನ್ನು ಬಗೆಹರಿಸುತ್ತೇವೆ ಬಡವರ ಬಗ್ಗೆ ಕೆಲಸ ಮಾಡುತ್ತೇವೆ

ಸಾಮಾಜಿಕ ನ್ಯಾಯ ಕೊಡುತ್ತೇವೆ ಎಂಬ ಮಾತು ಹೇಳಿಕೊಂಡು ಜನಸೇವೆ ಮಾಡುತ್ತೇವೆ ಅಂತ ಹೇಳಿಕೊಂಡು ಬಂದಿದ್ದೇವೆ. ಆದ್ದರಿಂದ ಅದಕ್ಕೆ ಹೆಚ್ಚು ಮಹತ್ವ ಕೊಡತಕ್ಕಂಥಾದ್ದು ಬಹಳ ಮುಖ್ಯವಾಗುತ್ತದೆ. ತಾವು ಕೂಡ ಸಾಮಾಜಿಕ ನ್ಯಾಯಕ್ಕೆ ಬದ್ದರಾಗಿ ಇಲ್ಲಿ ನಿಮಗೆ ಅನುಭವ ಇದೆ. ಮೂರನೇ ಸಾರಿ ಇಲ್ಲಿಗೆ ಆಯ್ಕೆಯಾಗಿ ಬಂದಿದ್ದೀರಿ. ಹೊಸಬರೇನಲ್ಲ. ಮೂರನೇ ಸಾರಿ ಆಯ್ಕೆಯಾಗಿ ಬಂದಿರುವುದರಿಂದ ಈ ಸದನದ ಎಲ್ಲ ಚಟುವಟಿಕೆಗಳು ಈ ಸದನದ ಪರಂಪರೆ ಇತಿಹಾಸ ಇಲ್ಲೇನು ನಡೆಯುತ್ತದೆ ಎಂದು ಗೊತ್ತಿರುವುದರಿಂದ ಈ ಅನುಭವ ಮತ್ತೆ ನಿಮ್ಮ ಸ್ವಭಾವಗಳು ನಿಮ್ಮನ್ನು ಈ ಸ್ಥಾನಕ್ಕೆ ಗೌರವ ಹೆಚ್ಚು ಮಾಡುವ ಕೆಲಸ ಆಗುತ್ತದೆ ನಿಮ್ಮಿಂದ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ ನಿಮಗೆ ಮತ್ತೊಮ್ಮೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮತ್ತು ನಮ್ಮೆಲ್ಲರ ಎಲ್ಲ ರೀತಿಯ ಸಹಕಾರ ಕೂಡ ನಿಮಗಿರುತ್ತದೆ ಎಂಬ ಭರವಸೆ ಕೊಟ್ಟು ನನ್ನ ಎರಡು ಮಾತು ಮುಗಿಸುತ್ತೇನೆ.

ಶ್ರೀ ಡಿ ಮಂಜುನಾಥ್ (ಮಾನ್ಯ ಉನ್ನತ ಶಿಕ್ಷಣ ಸಚಿವರು) : ಮಾನ್ಯ ಉಪಾಧ್ಯಕ್ಷರೇ ತಾವು ಅವಿರೋಧವಾಗಿ ಆಯ್ಕೆಯಾಗಿರುವುದು ತುಂಬ ಸಂತೋಷವಾಗಿದೆ. ಚಿತ್ರದುರ್ಗ ಜಿಲ್ಲೆಯ ಅತಿ ಹಿಂದುಳಿದ ಕ್ಷೇತ್ರವಾದ ಮೊಳಕಾಲ್ಮೂರಿನಿಂದ ಮೂರು ಸಾರಿ ಆಯ್ಕೆಯಾಗಿ ಒಳ್ಳೆಯ ಸೇವೆ ಸಲ್ಲಿಸುತ್ತಾ ಇದ್ದೀರಿ. ನಾನು ಸಹ ಬಹಳ ದಿವಸದಿಂದ ನಿಮ್ಮನ್ನು ನೋಡಿದ್ದೇನೆ. ಈಗಾಗಲೇ ಅನೇಕ ಮಹನೀಯರು ಮಾತನಾಡಿದ್ದಾರೆ. ಮುಖ್ಯಮಂತ್ರಿಗಳು. ಉಪಮುಖ್ಯಮಂತ್ರಿಗಳು. ವಿರೋಧ ಪಕ್ಷದ ನಾಯಕರು. ಎಲ್ಲರು ಮಾತನಾಡಿದ್ದಾರೆ. ಆ ಸ್ಥಾನದಲ್ಲಿ ಈಗ್ಗೆ 37 ವರ್ಷಗಳ ಹಿಂದೆ ನಾನೂ ಸಹ ಉಪಾಧ್ಯಕ್ಷನಾಗಿ ಕೂತಿದ್ದೆ. ವೈಕುಂಠ ಬಾಳಿಗ ತೀರಿಕೊಂಡ ಮೇಲೆ ಒಂದು ವರ್ಷ ಅಧ್ಯಕ್ಷನಾಗಿ ನಾನು ನಿರ್ವಹಿಸಿದೆ. ಇಲ್ಲಿ ನಿಷ್ಪಕ್ಷಪಾತವಾಗಿ ಕೆಲಸ ಮಾಡಬೇಕಾಗುತ್ತದೆ. ಅಲ್ಲಿ ಕೂತ ಮೇಲೆ. ಅಧ್ಯಕ್ಷರು ಮತ್ತು ನಿಮ್ಮ ಸ್ವಭಾವ ಗೊತ್ತಿದೆ. ನೀವು ಬಹಳ ದಕ್ಷತೆಯಿಂದ ಈ ಸಭೆ ನಡೆಸುತ್ತೀರ ಎಂದು ನನಗೆ ಖಾತರಿ ಇದೆ. ಆದ್ದರಿಂದ ಎಲ್ಲರೂ ನಿಮಗೆ ಶುಭಾಶಯ ಕೋರಿದ್ದಾರೆ. ನಮ್ಮ ಜಿಲ್ಲೆಯ ಒಬ್ಬ ಮಂತ್ರಿಯಾಗಿ ನಿಮಗೆ ನಾನು ಸಹ ನೀವು ಸಹ ಇವತ್ತಿನ ದಿವಸ ಬಹಳ ನಿರ್ವಂಚನೆಯಿಂದ ನಿಷ್ಪಕ್ಷಪಾತವಾಗಿ ಈ ಸಭೆಯನ್ನು ನಡೆಸುತ್ತೀರಿ ಅಂತ ನಂಬಿಕೆ ಇದೆ. ಅದರ ಜೊತೆಗೆ ನಿಮ್ಮ ಅಣ್ಣ. ಲೋಕಸಭಾ ಸದಸ್ಯರು ಎನ್.ವೈ.ಹನುಮಂತಪ್ಪನವರೂ ಒಳ್ಳೆಯ ಸೇವೆ ಮಾಡುತ್ತಿದ್ದಾರೆ. ಅದು ಬಹಳ ಹಿಂದುಳಿದ ಪ್ರದೇಶ. ಆದರೂ ಸಹ ಸಾಕಷ್ಟು ಕೆಲಸಗಳನ್ನು ಅಲ್ಲಿ ಮಾಡಿದ್ದೇನೆ. ನೀವೂ ಸಹ ಶ್ರಮವಹಿಸಿ ಆ ಬಡ ಜನತೆಗೆ ಹೆಚ್ಚು ಸಹಾಯ ಮಾಡಬೇಕು ಅಂತ ಕೇಳಿ ಈ ಸಭೆ ನಡೆಸುವುದಕ್ಕೆ ದೇವರು

ನಿಮಗೆ ಸರ್ವಶಕ್ತಿಯನ್ನೂ ಕೊಡಲಿ ಅಂತ ನಿಮಗೆ ಧನ್ಯವಾದ ಅರ್ಪಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಕೆ ಎಸ್ ಈಶ್ವರಪ್ಪ : ಅಧ್ಯಕ್ಷರೇ ತಾವು ಮೂರನೇ ಬಾರಿ ಆಯ್ಕೆಯಾದ ನಂತರ ತಮ್ಮ ಅನುಭವ ಮತ್ತು ಬೇರೆಬೇರೆ ಅಧ್ಯಕ್ಷ ಸ್ಥಾನವನ್ನು ಪಡೆದು ಅಲ್ಲಿ ಯಶಸ್ವಿಯಾಗಿರುವಂತಹ ಅನುಭವ – ಇದೆರಡರಿಂದ ನೀವು ಈ ಸ್ಥಾನಕ್ಕೆ ಬಂದಿದ್ದೀರಿ ಅಂತ ನನ್ನ ಭಾವನೆ. ಮೊಟ್ಟಮೊದಲನೆಯದಾಗಿ ನಿಮಗೆ ನನ್ನಿಂದ ಮತ್ತು ನನ್ನ ಪಕ್ಷದ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುವುದಕ್ಕೆ ನಾನು ಇಷ್ಟಪಡುತ್ತೇನೆ. ತಾವು ವಿಶೇಷವಾಗಿ ಕೈಗಾರಿಕಾ ಇಲಾಖೆಯ ಅಧ್ಯಕ್ಷರಾದ ನಂತರ ಬಡವರ ಪರವಾಗಿ ಮಾಡಿದಂತಹ ಕಾರ್ಯಗಳು ಆ ಸಂದರ್ಭದಲ್ಲಿ ನಾನು ತಮ್ಮನ್ನು ಭೇಟಿ ಮಾಡಿದಾಗ ತಾವು ತೋರಿದಂತಹ ಜವಾಬ್ದಾರಿಯ ಪ್ರಯತ್ನಗಳನ್ನು ನನಗೆ ಇನ್ನೂ ಕೂಡ ನೆನಪಿದೆ. ಬಹಳ ಯಶಸ್ವಿಯಾಗಿ ಆ ಅಧ್ಯಕ್ಷರಾಗಿ ಸೇವೆ ಮಾಡಿದ್ದೀರಿ. ಆಗಲೇ ನೀವು ಪಕ್ಷಾತೀತರಾಗಿ ಜನಸಾಮಾನ್ಯರ ಕೆಲಸಗಳನ್ನು ಕೂಡ ಮಾಡುತ್ತಾ ಇದ್ದೀರಿ. ಇವತ್ತು ಇಡೀ ದೇಶದಲ್ಲಿ ಸಭಾಧ್ಯಕ್ಷ ಸ್ಥಾನದಲ್ಲಿದ್ದು ಕೆಲವು ವ್ಯಕ್ತಿಗಳು ಪ್ರಜಾಪ್ರಭುತ್ವಕ್ಕೇನೆ ಅಪಚಾರ ಮಾಡಿರುವ ರೀತಿಯಲ್ಲಿ ಮಾಡುತ್ತಾ ಇರುವುದು ನಾವೆಲ್ಲ ಕಾಣುತ್ತಿದ್ದೇವೆ. ಅವರೆಲ್ಲರೂ ಉತ್ತರ ಕೊಡುವ ರೀತಿಯಲ್ಲಿ ಒಬ್ಬ ಮಾದರಿ ವಿಧಾನಸಭಾ ಉಪಾಧ್ಯಕ್ಷರಾಗಿ ತಾವು ಯಶಸ್ವಿಯಾಗಬೇಕು ಎಂಬ ಹಾರೈಕೆ ಮಾಡಲು ಈ ಸಂದರ್ಭದಲ್ಲಿ ಇಷ್ಟಪಡುತ್ತೇನೆ. ತಾವು ಈ ಸ್ಥಾನಕ್ಕೆ ಅಲಂಕಾರ ಆಗಿರುವುದು ಕೇವಲ ನಿಮ್ಮ ಕ್ಷೇತ್ರಕ್ಕೆ ಅಷ್ಟೇ ಅಲ್ಲದೇನೆ. ತಾವು ಇವತ್ತು ಈ ಸ್ಥಾನಕ್ಕೆ ಅಲಂಕಾರವಾಗಿರುವುದು ಕೇವಲ ನಿಮ್ಮ ಕ್ಷೇತ್ರಕ್ಕೆ ಅಷ್ಟೇ ಅಲ್ಲದೆ ಇಡೀ ರಾಜ್ಯದ ಎಲ್ಲ ಹಿಂದುಳಿದ ವರ್ಗದ ವಿಶೇಷವಾಗಿ ಹಿಂದುಳಿದ ವರ್ಗದ ಜನರು ಇವತ್ತು ತುಂಬ ಸಂತೋಷಪಟ್ಟಿದ್ದಾರೆ. ಹಿಂದೆಯೇ ತಾವು ಮಂತ್ರಿಗಳಾಗಬಹುದು ಎನ್ನತಕ್ಕ ಅಪೇಕ್ಷೆ ಇದ್ದ ಸಂದರ್ಭದಲ್ಲಿ ಕೂಡ ಅದರಿಂದ ತಾವು ವಂಚಿತರಾಗಿದ್ದು ಅನೇಕರಿಗೆ ನೋವಾಗಿದೆ. ಅದರಿಂದ ನನಗೂ ಕೂಡ ಆ ಸಂದರ್ಭದಲ್ಲಿ ತುಂಬಾ ನೋವಾಗಿತ್ತು. ಇವತ್ತು ಮಂತ್ರಿ ಸ್ಥಾನ ಅದಕ್ಕಿಂತಲೂ ಕೂಡ ಒಂದು ರೀತಿ ಉನ್ನತ ಸ್ಥಾನವನ್ನು ಇವತ್ತು ಪಡೆದು ಇವತ್ತು ರಾಜ್ಯದ ಎಲ್ಲಾ ವರ್ಗದ ಜನತೆಗೂ ಕೂಡ ತುಂಬ ಸಂತೋಷವಾಗುವ ರೀತಿಯಲ್ಲಿ ತಾವು ತಮ್ಮ ಸ್ಥಾನವನ್ನು ಅಲಂಕಾರ ಮಾಡಿದ್ದೀರಿ. ಬರುವಂಥ ದಿನಗಳಲ್ಲಿ ಆ ಪರಮಾತ್ಮ ನಿಮ್ಮ ಅನುಭವಕ್ಕೆ ನಿಮ್ಮ ಪ್ರತಿಭೆಗೆ ತಕ್ಕಂತೆ ಇನ್ನೂ ಹೆಚ್ಚಿನ ಸ್ಥಾನವನ್ನು ಕೊಟ್ಟು ಅದರಲ್ಲೂ ತಾವು ಯಶಸ್ವಿಯಾಗಬೇಕೆಂದು ಹೇಳಿ ನಾನು ಹಾರೈಸುತ್ತೇನೆ.

ಶ್ರೀ ಜಿ.ಬಸವಣ್ಣೆಪ್ಪ (ಹೊಳೆಹೊನ್ನೂರು):– ಮಾನ್ಯ ಉಪಾಧ್ಯಕ್ಷರೇ. ತಾವು ಈ ಮನೆಯ ಉಪಾಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾಗಿರುವುದು ನಮಗೆಲ್ಲರಿಗೂ ಬಹಳ ಸಂತೋಷವಾಗಿದೆ. ನನ್ನ ತಮ್ಮ ಪರಿಚಯ ಕಳೆದ 15 ವರ್ಷಗಳಿಂದ ಇದೆ. ತಾವು ಅತ್ಯಂತ ಹಿಂದುಳಿದ ವರ್ಗದಿಂದ ಬಂದಂಥವರು. ಮೂರು ಸಾರಿ ಈ ವಿಧಾನಸಭೆಗೆ ಆಯ್ಕೆಯಾಗಿದ್ದೀರಿ. ವಿವಿಧ ಸಮಿತಿಗಳಲ್ಲಿ ಸೇವೆಯನ್ನು ಮಾಡಿ ಸಾಮಾಜಿಕ ಸೇವೇಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಈ ರಾಜ್ಯದಲ್ಲಿ ಒಳ್ಳೆಯ ಹೆಸರನ್ನು ಪಡೆದಿದ್ದೀರಿ. ಅಷ್ಟೇ ಹಿಂದುಳಿದ ಪ್ರದೇಶವಾದ ಮೊಳಕಾಲ್ಮೂರಿನಿಂದ ಬಂದಿದ್ದೀರಿ. ಅತ್ಯಂತ ಹಿಂದುಳಿದ ಪ್ರದೇಶವದು. ನಿಮ್ಮ ಸಹೋದರರಾದ ಎನ್.ವೈ.ಹನುಮಂತಪ್ಪನವರು ನನ್ನ ಆತ್ಮೀಯ ಸ್ನೇಹಿತರು. ನ್ಯಾಯವಾದಿಗಳು, ಲೋಕಸಭಾ ಸದಸ್ಯರು. ಅವರೂ ಸಹ ಹಿಂದುಳಿದ ಪ್ರದೇಶ ಚಿತ್ರದುರ್ಗ ಜಿಲ್ಲೆಯನ್ನು ಪ್ರತಿನಿಧಿಸಿದ್ದಾರೆ. ತಾವಿಬ್ಬರೂ ಆ ಹಿಂದುಳಿದ ಪ್ರದೇಶದ ಪ್ರಗತಿಗೆ ದುಡಿಯುತ್ತೀರಿ ಎನ್ನತಕ್ಕ ಸಂಪೂರ್ಣ ವಿಶ್ವಾಸ ಇದೆ. ಈ ಮನೆಯ ಉಪಾಧ್ಯಕ್ಷರಾಗಿ. ಸಮರ್ಥರಾಗಿ ನ್ಯಾಯವನ್ನು ಎತ್ತಿ ಹಿಡಿಯುವ ಕೆಲಸವನ್ನು ಮಾಡತಕ್ಕ ಶಕ್ತಿಯನ್ನು ಆ ಭಗವಂತನು ಕರುಣಿಸಲಿ ಎಂದು ಹೇಳಿ ನಾನು ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ.

ಶ್ರೀ ಎಸ್.ಎಸ್.ಪಾಟೀಲ್ (ಮುಂಡರಗಿ):– ಮಾನ್ಯ ಉಪಾಧ್ಯಕ್ಷರೇ. ತಮಗೆ ಶುಭಾಶಯಗಳನ್ನು ಹೇಳುತ್ತಾ ನಿಜವಾಗಿಯೂ ನನಗಂತೂ ಬಹಳ ಸಂತೋಷವಾಗಿದೆ. ನನ್ನ ಒಬ್ಬ ಬೆಂಚ್‌ಮೇಟ್ ಇಬ್ಬರೂ ಕೂಡ ಸುಮಾರು ಹೊಸ ಅಸೆಂಬ್ಲಿ ಬಂದಾಗಿನಿಂದಲೂ ನಾವಿಬ್ಬರೂ ಒಂದೇ ಬೆಂಚ್‌ನಲ್ಲಿ ಕೂತು ಕೆಲಸ ಮಾಡತಕ್ಕ ಅವಕಾಶ ಬಂತು. ಅಷ್ಟೇ ಅಲ್ಲ ಮೊದಲು ತಾವು ಆರಿಸಿ ಬರುವಾಗ ನಾನೊಂದು ಪಕ್ಷದಲ್ಲಿದ್ದೆ ತಾವೊಂದು ಪಕ್ಷದಲ್ಲಿದ್ದಿರಿ. ಬಹುಶಃ ತಮ್ಮ ವಿರುದ್ಧ ನನಗೆ ಆ ಒಂದು ಚುನಾವಣೆಯಲ್ಲಿ ಮೊಳಕಾಲ್ಮೂರು ಕ್ಷೇತ್ರದ ಉಸ್ತುವಾರಿಯನ್ನು ಒಬ್ಬ ಮಂತ್ರಿಯಾಗಿ ನನಗೆ ನೇಮಿಸಿಬಿಟ್ಟರು. ಹೀಗಾಗಿ ಮೊದಲನೇ ಸಲ ನೀ ಆರಿಸಿಬರುವ ಮುನ್ನವೇ ನಾವು ನೀವು ಇಬ್ಬರೂ ಭಯಂಕರ ವಿರೋಧ ಮಾಡಿದ್ದೆವು. ಆದರೆ ತಾವು ಆರಿಸಿಬಂದಮೇಲೆ ಅಸೆಂಬ್ಲಿಯಲ್ಲಿ ನಾವಿಬ್ಬರೂ ಮೊದಲಿನಂತೆ ಬಹಳ ಆತ್ಮೀಯ ಮಿತ್ರರಾಗಿ ಇವತ್ತು ಕೆಲಸ ಮಾಡತಕ್ಕ ಒಂದು ಅವಕಾಶ ಬಂದಿತ್ತು ಮತ್ತು ನಿಮಗಿಂತ ಮೊದಲು ನಾನು ನಿಮ್ಮ ಅಣ್ಣ ಹನುಮಂತಪ್ಪನವರು ಅವರು ವಕೀಲರಿದ್ದಾಗಿನಿಂದಲೂ ನಮ್ಮ ಅವರ ಒಂದು ಆತ್ಮೀಯ ಸಂಬಂಧವಿತ್ತು. ತದನಂತರ ತಾವು ಇಲ್ಲಿಗೆ ಬಂದಮೇಲೆ ನಿಜವಾಗಿಯೂ ನಾನು ಮಂತ್ರಿ ಇರುವ

ಅವಧಿಯವರೆಗೂ ನಾವು ನೀವು ಬಹಳ ಆತ್ಮೀಯ ಸಂಬಂಧವನ್ನು ಬೆಳೆಸಿಕೊಂಡು ಬಂದೆವು. ಹೋದಸಲ ನಾನೊಂದು ಪಕ್ಷ ನೀವೊಂದು ಪಕ್ಷದಲ್ಲಿದ್ದರೂ ಕೂಡ ಬಹಳ ಆತ್ಮೀಯ ಸಂಬಂಧ ನಮ್ಮದು ನಿಮ್ಮದು ಬೆಳೆದುಬಂದಿದೆ. ಅದೇನೊ ದೈವೇಚ್ಛೆ ಎನ್ನುವ ಹಾಗೆ ಇಬ್ಬರೂ ಒಂದೇ ಪಕ್ಷದಲ್ಲಿ ಬರುವಂಥ ಅವಕಾಶ ಬಂತು. ಆಮೇಲೆ ಇಬ್ಬರೂ ಒಂದೇ ಬೆಂಚ್‌ನಲ್ಲಿ ಕೂತು ಕೆಲಸ ಮಾಡತಕ್ಕಂಥ ಅವಕಾಶ ಬಂದು ಇವತ್ತು ನನ್ನ ಬೆಂಚ್‌ನಲ್ಲಿದ್ದಂಥವರು ಆ ಜಾಗದಲ್ಲಿ ಹೋಗಿ ಕೂತದ್ದು ನನಗಂತೂ ಬಹಳ ಸಂತೋಷ ಮತ್ತು ಆನಂದವಾಗಿದೆ. ಇದೀಗ ಎಲ್ಲರೂ ಹೇಳಿದರು. ನಮ್ಮ ಕಡೆ ನೋಡ್ರಿ, ನಿಮ್ಮ ಕಡೆ ನೋಡ್ರಿ ಎಂದು. ಯಾರ ಕಡೆಯೂ ನೋಡುವುದು ಬೇಡ. ಬಹುಶಃ ತಮ್ಮ ಮೇಲೊಂದು ತಕ್ಕಡಿಯನ್ನು ಹಾಕಿದ್ದಾರೆ. ಬಸವಣ್ಣನವರು ಒಂದು ಕಡೆ ಹೇಳುತ್ತಾರೆ.

ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿಯನಿಟ್ಟ
ಹರದ ಕುಳಿತ ನಮ್ಮ ಮಹದೇವಶೆಟ್ಟಿ
ಒಮ್ಮನವಾದರೆ ನುಡಿವ ಹಿಮ್ಮನವಾದರೆ ನುಡಿಯ.
ಕಾಣೆಯ ಸೊಲ್ಲ ಅರ್ಧಗಾಣೆಯ ಗಲ್ಲ
ಜಾಣ ನೋಡವ್ವ ನಮ್ಮ ಕೂಡಲಸಂಗಮದೇವ

ಎಂದು ನಮ್ಮ ಬಸವಣ್ಣನವರು ಹೇಳುತ್ತಾರೆ. ಯಾರ ಕಡೆಯೂ ಹೆಚ್ಚು ಕಡಿಮೆ ಬೇಡ. ಎಲ್ಲರನ್ನೂ ಈ ಸದನದಲ್ಲಿರುವ ಎಲ್ಲಾ ಸದಸ್ಯರು ತಮಗೆ ಸಮಾನರು. ಎಲ್ಲ ಪಕ್ಷಗಳೂ ಸಮಾನವು. ಯಾರದು ತಪ್ಪು ಇರುತ್ತದೆ. ಅವರದು ತಪ್ಪೆಂದು ಹೇಳುವುದು. ಯಾರದು ಒಪ್ಪು ಇರುತ್ತದೆ. ಅದನ್ನು ಒಪ್ಪೆಂದು ಹೇಳತಕ್ಕ ಜವಾಬ್ದಾರಿ ಸ್ಥಾನದಲ್ಲಿ ತಾವು ಕುಳಿತಿದ್ದೀರಿ. ಅದರಲ್ಲೂ ತಮ್ಮ ಸುದೈವ. ಒಬ್ಬರು ಒಳ್ಳೆಯ ಅಧ್ಯಕ್ಷರಿದ್ದಾಗ ತಾವು ಆ ಸ್ಥಾನಕ್ಕೆ ಹೋಗಿದ್ದೀರಿ. ಕಳೆದ ಎಂಟು ತಿಂಗಳಿಂದ ನಮ್ಮ ಅಧ್ಯಕ್ಷರು ನಡೆಸತಕ್ಕಂಥದ್ದು ನೋಡಿದರೆ ಬಹುಶಃ ಎರಡೂ ಕಡೆಯವರೂ ಕೂಡ ಬಹಳ ಸಮಾಧಾನದಿಂದ ನಾವು ಇವತ್ತು ಅವರನ್ನು ಅಭಿನಂದಿಸುತ್ತಿದ್ದೇವೆ. ಆ ಒಂದು ಹಿನ್ನೆಲೆಯಲ್ಲಿ ಈ ನಮ್ಮ ವಿಧಾನಸಭೆಗೆ ಬಹಳ ಹೆಚ್ಚಿನ ಗೌರವ ಇಡೀ ರಾಷ್ಟ್ರದಲ್ಲಿದೆ. ಈ ಸದನಕ್ಕೆ ಇರತಕ್ಕ ಗೌರವ ತಮ್ಮ ಅವಧಿಯಲ್ಲಿ ಇನ್ನೂ ಹೆಚ್ಚಾಗಿ ಬೆಳೆಯಲಿ ಎಂದು ಹೇಳಿ ಆದರೆ ದುರ್ದೈವದಿಂದ ಅದ್ಯಾಕೆ ಆ ರೀತಿ ಆಗಿದೆಯೋ ಗೊತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಇಲ್ಲೇ ಇದ್ದಾರೆ. ಬಹುಶಃ ತಮ್ಮ ಸ್ಥಾನ ಅಲ್ಲಿ

ಇದ್ದರೂ ಕೂಡ ಅದನ್ನು ಸ್ಟೇಟ್ ಮಿನಿಸ್ಟರ್ ಕೇಡರ್ ಎಂದು ಇಟ್ಟಿದ್ದಾರೆ. ಛೇರ್ಮನ್ ವಗೈರೆ ನಾವು ಕ್ಯಾಬಿನೆಟ್ ಮಾಡಿದಾಗ ಅದನ್ನು ಯಾವ ದೃಷ್ಟಿಯಿಂದ ಮಾಡಿದ್ದಾರೆನ್ನುವುದು ದಯವಿಟ್ಟು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲೂ ಕೂಡ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಅಂಥ ಒಂದು ಉಚ್ಚ ಸ್ಥಾನದಲ್ಲಿರುವ ಉಪಾಧ್ಯಕ್ಷರನ್ನು ಕೂಡ ಕ್ಯಾಬಿನೆಟ್ ಮನ್ನಣೆಯನ್ನು ತಾವು ಕೊಟ್ಟರೆ ಹೆಚ್ಚು ಸೂಕ್ತವಾಗುತ್ತದೆ ಎನ್ನುವ ಮಾತನ್ನು ಕೂಡ ಈ ಸಂದರ್ಭದಲ್ಲಿ ಹೇಳಿ ಆ ರೀತಿಯಾಗಿ ತಾವು ಕೂಡ ಕನ್‌ಸಿಡರ್ ಮಾಡಬೇಕೆಂದು ತಮಗೂ ಮತ್ತು ವಿಧಾನಸಭಾ ಅಧ್ಯಕ್ಷರಿಗೂ ಕೂಡ ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಂಡು ಮತ್ತೊಮ್ಮೆ ತಮಗೆ ದೇವರು ಒಳ್ಳೆಯದನ್ನು ಮಾಡಲಿ. ಬಹಳ ಯಶಸ್ವಿ ಉಪಾಧ್ಯಕ್ಷರಾಗಿ ಕೆಲಸವನ್ನು ಮಾಡುತ್ತೀರಿ ಎನ್ನತಕ್ಕ ವಿಶ್ವಾಸ ಕೂಡ ನನಗಿದೆ. ಆ ರೀತಿಯಾಗಿ ತಾವು ನಡೆಸಿಕೊಂಡು ಹೋಗಬೇಕು. ಆ ಸದ್ಬುದ್ಧಿ ಆ ದಯಾಗುಣ ತಮಗೆ ದಯಪಾಲಿಸಲಿ ಎಂದು ಹೇಳಿ ತಮಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಉಪಾಧ್ಯಕ್ಷರೇ. ಇದೊಂದು ಒಳ್ಳೆಯ ಸುದಿನ ಎಂದು ನಾನಂದುಕೊಂಡಿದ್ದೇನೆ. ಉಪಾಧ್ಯಕ್ಷರಾಗಿ ಆಯ್ಕೆಯಾದ ಗೋಪಾಲಕೃಷ್ಣರವರು ಅವರ ಮನೆತನಕ್ಕೂ ನನಗೂ ಸುಮಾರು 35 ವರ್ಷದ ಬಾಂಧವ್ಯ ಅವರ ಸಹೋದರರು ಹನುಮಂತಪ್ಪನವರು ನಮ್ಮ ಜೊತೆಯಲ್ಲಿ ವರ್ಷಗಟ್ಟಲೆ ಓಡಾಡಿದ್ದಾರೆ. ನಿವೃತ್ತ ಮುಖ್ಯ ನ್ಯಾಯಾಧೀಶರಾಗಿ. ಮತ್ತು ಈಗ ಲೋಕಸಭಾ ಸದಸ್ಯರಾಗಿ ಕೆಲಸ ಮಾಡಿರತಕ್ಕಂಥವರು. ಅವರ ಮನೆತನದಲ್ಲಿ ಬಂದಿರತಕ್ಕಂಥ ಅತ್ಯಂತ ಸಹೃದಯ ಇರತಕ್ಕಂಥ ನಮ್ಮ ಆತ್ಮೀಯ ಸ್ನೇಹಿತರು. ನಾವು ನೀವೆಲ್ಲಾ ಯುರೋಪ್ ದೇಶಗಳಿಗೆಲ್ಲಾ ಸುತ್ತಿ ನಿಮ್ಮ ನಡವಳಿಕೆ. ನಿಮ್ಮ ಸ್ನೇಹ. ನಮ್ಮೆಲ್ಲರಿಗೂ ಬಹಳ ದಾರಿದೀಪವಾಗಿದೆ. ತಾವು ಉಪಾಧ್ಯಕ್ಷರಾಗಿ ಆಯ್ಕೆಯಾದುದು ನಮಗಂತೂ ಬಹಳ ಸಂತೋಷ. ಈ ಸಂದರ್ಭದಲ್ಲಿ ಒಂದು ಮನವಿಯನ್ನು ಮಾಡುತ್ತೇನೆ. ಯಾವಾಗಲೂ ನಾನು ಎದ್ದಾಗ ತಾವು ನನಗೆ ಅವಕಾಶವನ್ನು ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ.ಚೆನ್ನಿಗಪ್ಪ (ಮಾನ್ಯ ರೇಷ್ಮೆ ಸಚಿವರು):– ಮಾನ್ಯ ಉಪಾಧ್ಯಕ್ಷರೇ. ಇವತ್ತಿನ ಸಂಪ್ರದಾಯಬದ್ಧ ಈ ವಿಧಾನಸಭೆಯಲ್ಲಿ ಇವತ್ತು ತಮ್ಮನ್ನು ಅವಿರೋಧವಾಗಿ ಆಯ್ಕೆ ಮಾಡಿರುವುದು ಕರ್ನಾಟಕ ರಾಜ್ಯದ ವಿಧಾನಸಭೆಗೆ ಬಂದಂಥ ಒಂದು ಗೌರವ. ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪಮುಖ್ಯಮಂತ್ರಿಗಳು ತಮ್ಮ

ವಿಧಾನಸಭೆಯ ನಡವಳಿಯಲ್ಲಿ ಯಾರನ್ನು ಆರಿಸಬೇಕು. ಯಾರನ್ನು ಬಿಡಬೇಕು. ಎಂದು ಈ ಸಭೆ ತೀರ್ಮಾನವನ್ನು ಮಾಡಿದಾಗ ತಮ್ಮ ಸೇವೆ ಈ ರಾಜ್ಯಕ್ಕೆ ಮತ್ತು ವಿಧಾನಸಭೆಗೆ ಅಪಾರ ಮತ್ತು ಅನನ್ಯ. ಈ ಸದನದಲ್ಲಿ ನಾವು ನೀವು ಮೂರು ಸಾರಿ ಇಲ್ಲಿ ವಿಧಾನಸಭೆಯ ಸದಸ್ಯರಾಗಿ ಬಂದಾಗಲೂ ಕೂಡ ತಮ್ಮ ನಿಜವಾದ ಕಳಕಳಿಯ ಅನೇಕ ವಿಚಾರಗಳನ್ನು ತಾವು ಇಲ್ಲಿ ಪ್ರಸ್ತಾಪಮಾಡಿದ್ದೀರಿ. ಸಾಮಾನ್ಯ ಜನರ. ದೀನದಲಿತರ. ಹಿಂದುಳಿದ ವರ್ಗದವರ ಅಭಿವೃದ್ಧಿಗೋಸ್ಕರ ಅನೇಕ ಸಂಸ್ಥೆಗಳಿಗೆ ಅಧ್ಯಕ್ಷರಾಗಿ ತಾವು ತಮ್ಮ ಕೆಲಸವನ್ನು ಮಾಡಿದ್ದೀರಿ. ಆದರೆ ತಮ್ಮ ನಿಜವಾದ ಆಯ್ಕೆಯನ್ನು ಕಂಡಾಗ ನಿಜವಾಗಿ ಬೆಳಿಗ್ಗೆ ಪೇಪರ್‌ನಲ್ಲಿ ನೋಡಿದಾಗ ಬಹಳ ಸಂತೋಷವಾಯಿತು. ಏಕೆಂದರೆ ನಮ್ಮ ಸನ್ಮಾನ್ಯ ಗೋಪಾಲಕೃಷ್ಣ ಅವರು ತಾವೇನು ಇವತ್ತು ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದೀರಿ. ಇವರ ಗೆಲುವು ನಿಜವಾಗಿ ಇವರನ್ನು ಎಷ್ಟರಮಟ್ಟಿಗೆ ಅವಿರೋಧವಾಗಿ ಆಯ್ಕೆಮಾಡಿದ್ದಾರೆ ಎಂದು ನನ್ನ ಮನಸ್ಸಿನಲ್ಲಿ ಅಂದುಕೊಂಡಾಗ ತಾವು ಮಾಡಿದ ಮತ್ತು ತಾವು ನಡೆದು ಬಂದಂಥ ದಾರಿ. ಮತ್ತು ನೀವು ಮಾಡಿದಂಥ ಉತ್ತಮವಾದ ಸೇವೆ. ತಮ್ಮ ನಿಜವಾದ ಗಾಂಭೀರ್ಯವಾದ ಒಂದು ಶಾಂತಿಯುತವಾದ ತೀರ್ಮಾನವೆಂದು ತಾವು ಅಂದುಕೊಳ್ಳಬಹುದು. ಆದ್ದರಿಂದ ಮಾನ್ಯ ಉಪಾಧ್ಯಕ್ಷರಾದ ತಾವು ಈ ಸದನದ ಕಾರ್ಯಕಲಾಪಗಳಲ್ಲಿ ಇವತ್ತು ಹೆಚ್ಚಿಗೆ ನಮ್ಮ ಮಾನ್ಯ ಸದಸ್ಯರುಗಳು ಅನೇಕ ವಿಚಾರಗಳನ್ನು ಅದರಲ್ಲೂ ರಾಜ್ಯಕ್ಕೆ ಅಭಿವೃದ್ಧಿಯಾಗುವ ವಿಚಾರದಲ್ಲಿ ಚರ್ಚೆ ಮಾಡತಕ್ಕ ಸಂದರ್ಭದಲ್ಲಿ ಅವರಿಗೆ ಯಾವ ರೀತಿ ಕಾಲಾವಕಾಶವನ್ನು ಕೊಡಬೇಕೆಂದು ತಮಗೆ ಗೊತ್ತಿದೆ. ಆ ಕಾಲಾವಕಾಶವನ್ನು ಕೊಡುವ ಮುಖೇನ ರಾಜ್ಯದ ಅಭಿವೃದ್ಧಿಗೆ ಅನುಕೂಲವಾಗುವ ರೀತಿಯಲ್ಲಿ ತಾವು ಅವಕಾಶವನ್ನು ಮಾಡಿಕೊಡಬೇಕು. ಅದೇ ರೀತಿ ತಾವು ಮಾಡಿಕೊಡುತ್ತೀರಿ ಎನ್ನುವ ನಂಬಿಕೆಯೂ ನನಗಿದೆ. ನಿಮ್ಮ ಆಯ್ಕೆ ನಿಜವಾಗಿ ಈ ರಾಜ್ಯಕ್ಕೆ ತಂದಂಥ ಗೌರವ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದ್ದರಿಂದ ಇನ್ನು ಮುಂದೆ ನಿಜವಾದ ಆ ಪೀಠದಿಂದ ನಮಗೆ ನ್ಯಾಯ ಸಿಗುತ್ತದೆ ಎಂದು ನಂಬಿ ನಿಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್.ವೈ. ಗೋಪಾಲಕೃಷ್ಣ (ಮಾನ್ಯ ಉಪಾಧ್ಯಕ್ಷರು):– ಆಡಳಿತ ಪಕ್ಷದ ನಾಯಕರೂ ಮತ್ತು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳೂ ಕೂಡ ಆಗಿರತಕ್ಕಂಥ ಶ್ರೀಮಾನ್ ಧರ್ಮಸಿಂಗ್‌ರವರೇ. ಹಿರಿಯರು ಮತ್ತು ಈ ರಾಜ್ಯದ ರಾಜಕೀಯದಲ್ಲಿ ಬಹಳಷ್ಟು ಅನುಭವವನ್ನು ಹೊಂದಿರತಕ್ಕಂಥ ಉಪ ಮುಖ್ಯಮಂತ್ರಿಗಳೂ ಆಗಿರತಕ್ಕಂಥ ಶ್ರೀಮಾನ್ ಸಿದ್ದರಾಮಯ್ಯನವರೇ. ಜಲ ಸಂಪನ್ಮೂಲ ಮತ್ತು ಸಾರಿಗೆ

ಮಂತ್ರಿಗಳಾಗಿರತಕ್ಕಂಥ ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರೇ. ಹಿರಿಯರಾಗಿರತಕ್ಕಂಥ ಮತ್ತು ಶಿಕ್ಷಣ ಮಂತ್ರಿಗಳಾಗಿರತಕ್ಕಂಥ ಶ್ರೀಮಾನ್ ಡಿ. ಮಂಜುನಾಥ ಅವರೇ. ವಿರೋಧ ಪಕ್ಷದ ನಾಯಕರೂ ಮತ್ತು ನಮ್ಮ ಅಭಿಮಾನಿಗಳೂ ಕೂಡ ಆಗಿರತಕ್ಕಂಥ ಶ್ರೀಮಾನ್ ಯಡಿಯೂರಪ್ಪನವರೇ ಮತ್ತು ವಿರೋಧ ಪಕ್ಷದಲ್ಲಿ ಬಹಳಷ್ಟು ಅನುಭವವನ್ನು ಹೊಂದಿರತಕ್ಕಂಥ ಶ್ರೀಮಾನ್ ಈಶ್ವರಪ್ಪನವರೇ. ಬಹಳ ದಿನಗಳಿಂದ ನನಗೆ ಅಭಿಮಾನ ಪುರುಷರು. ನನ್ನ ವಿದ್ಯಾಭ್ಯಾಸದ ಜೀವನದಿಂದಲೂ ನಾನು ಬಹಳಷ್ಟು ಪ್ರೀತಿಸತಕ್ಕಂಥ ವ್ಯಕ್ತಿ ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಶಾಸಕರಾಗಿದ್ದಂತಹ ಸಂದರ್ಭದಲ್ಲಿ ನಾನು ಅವರ ಜೊತೆಯಲ್ಲಿ ಶಾಸಕನಾಗಿದ್ದಂತಹ ಒಂದು ಸಂದರ್ಭವನ್ನು ನೆನೆಸಿಕೊಂಡರೆ ಬಹಳ ಸಂತೋಷವಾಗುತ್ತಿದೆ. ಅವರು ಹೇಳಿದ ರೀತಿಯಲ್ಲಿ ಅವರು ಎದ್ದು ನಿಂತಾಗ ಹತ್ತು ನಿಮಿಷ. 20 ನಿಮಿಷ ಜಾಸ್ತಿ ಅವಕಾಶ ಕೊಡಿ ಎಂದು ಕೇಳಿದರೆ ನಮ್ಮ ಮತ್ತು ಅವರ ಮಧ್ಯೆದಲ್ಲಿರತಕ್ಕಂಥ ವಿಶ್ವಾಸಪೂರ್ವಕವಾಗಿ ಇನ್ನೊಂದು ಹತ್ತು ನಿಮಿಷ ಕಡಿಮೆ ಮಾಡುತ್ತೇನೆ. ಈ ದಿವಸ 18ನೇ ಉಪಾಧ್ಯಕ್ಷರ ಕಾಲ ಮುಗಿದು 19ನೇ ಉಪಾಧ್ಯಕ್ಷರ ಆಯ್ಕೆ ಮಾಡಿರತಕ್ಕಂಥ ಒಂದು ಸಂದರ್ಭ ನಿಜವಾಗಲೂ ಬಹಳ ಸಂತೋಷಪಡಬೇಕಾದ ಸಂದರ್ಭ. ಜೊತೆಗೆ ನನಗೆ ಬಹಳ ಅನಿರೀಕ್ಷಿತವಾಗಿ ಬಂದಿರತಕ್ಕಂಥ ಈ ಪದವಿಯನ್ನು. ಸದನದಲ್ಲಿ ನೋಡತಕ್ಕಂಥ ಬರೇ 224 ಜನ ಮಾತ್ರ ಶಾಸಕರಲ್ಲ. ಇಡೀ ಕರ್ನಾಟಕ ರಾಜ್ಯದ ಒಂದು ಭಾರವನ್ನೂ ಹೊರತಕ್ಕಂಥ ಒಂದು ಸಮಸ್ಯೆ ಇದರಲ್ಲಿ ಇರುವುದರಿಂದ ಅದರಲ್ಲಿ ಸದನದಲ್ಲಿ ಬಹಳಷ್ಟು ಅನುಭವವುಳ್ಳಂತ ದೊಡ್ಡ ದೊಡ್ಡ ರಾಜಕಾರಣಿಗಳು ಇರತಕ್ಕಂಥ ಈ ಸಂದರ್ಭದಲ್ಲಿ ಅವರೆಲ್ಲ ಕೆಳಗೆ ಕುಳಿತುಕೊಂಡು ನಾನು ಮೇಲೆ ಕುಳಿತುಕೊಂಡರೆ. ನಾನು ಈ ಒಂದು ಸ್ಥಾನಕ್ಕೆ ಅರ್ಹನೇ ಎಂದು ಹೇಳಿ ಹೆದರಿಕೊಂಡು ಸಾಧ್ಯವಾದಷ್ಟೂ ಕೂಡ ನಾನು ಈ ಪದವಿಯಿಂದ ದೂರ ಹೋಗಲು ಪ್ರಯತ್ನ ಪಟ್ಟೆ. ಕಾರಣ ಏಕೆಂದರೆ ಅದಕ್ಕೆ ನಾನು ವ್ಯವಸ್ಥಿತವಾಗಿ ನಡೆಸಿಕೊಂಡು ಹೋಗತಕ್ಕ ಶಕ್ತಿ ನನ್ನಲ್ಲಿ ಇದೆಯೊ ಎನ್ನುವ ಒಂದು ಪ್ರಶ್ನೆಯನ್ನು ನನ್ನಲ್ಲೇ ನಾನು ಹಾಕಿಕೊಂಡೆ. ಆದರೆ ಸಮ್ಮಿಶ್ರ ಸರ್ಕಾರದಲ್ಲೇ ಉಪ ಮುಖ್ಯಮಂತ್ರಿಗಳು. ಹಿರಿಯರಾಗಿರತಕ್ಕಂಥ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಾಗಿರುವಂತಹ ಶ್ರೀಮಾನ್ ಧರ್ಮಸಿಂಗ್ ಅವರು ಮತ್ತು ವಿರೋಧ ಪಕ್ಷದ ನಾಯಕರಾಗಿರತಕ್ಕಂಥ ಶ್ರೀಮಾನ್ ಯಡಿಯೂರಪ್ಪನವರು ಇನ್ನು ಎಂ.ಪಿ.ಪ್ರಕಾಶ್ ಅವರು. ನಮ್ಮ ಸ್ನೇಹಿತರಾದ ಶ್ರೀ ಬೋಸರಾಜು ಅವರು. ಮತ್ತು ಶ್ರೀ ಡಿ.ಕೆ.ಶಿವಕುಮಾರ್ ಅವರು. ಮಾನ್ಯ ಕುಮಾರ್ ಬಂಗಾರಪ್ಪನವರು. ಮಾನ್ಯ ಎಸ್.ಎಸ್. ಪಾಟೀಲ್ ಅವರು ಕೂಡ ಸಾಕಷ್ಟು ಉತ್ತೇಜನ ಕೊಟ್ಟು ಇದರಿಂದ

ಏನಾಗುವುದಿಲ್ಲ ನಾವೆಲ್ಲ ಜೊತೆಗೆ ಇರುತ್ತೇವೆ. ನೀವು ಧೈರ್ಯವಾಗಿ ನಡೆಸಿಕೊಂಡು ಹೋಗಿ ಎಂದು ಹೇಳಿದಂತಹ ಸಂದರ್ಭದಲ್ಲಿ ಸಮ್ಮಿಶ್ರ ಸರ್ಕಾರದಲ್ಲಿ ಸಾಕಷ್ಟು ಸಮಸ್ಯೆಗಳು ಬಂದರೂ ಕೂಡ. ಈ ಸಮಸ್ಯೆಗಳನ್ನು ತೂಗುವ ಶಕ್ತಿ ನಮಗೆ ಇದೆಯಾ ಎನ್ನುವಂತಹ ಪ್ರಶ್ನೆಗಿಂತ ಹೆಚ್ಚಾಗಿ ವಿರೋಧ ಪಕ್ಷದವರು ನಾನು ಈ ಸ್ಥಾನಕ್ಕೆ ಬಂದರೆ ಒಪ್ಪಿಕೊಳ್ಳುತ್ತಾರಾ ಎನ್ನುವ ಪ್ರಶ್ನೆ ಕೂಡ ನನಗೆ ಸ್ವಲ್ಪ ತೊಂದರೆ ಆಗತಕ್ಕಂಥ ಸಂದರ್ಭ ಕಂಡಿತು. ಆದರೆ ಮಾನ್ಯ ಯಡಿಯೂರಪ್ಪನವರು ಶ್ರೀ ಎಂ.ಪಿ.ಪ್ರಕಾಶ್ ಅವರು ಮಾನ್ಯ ಧರ್ಮಸಿಂಗ್ ಅವರ ಆದೇಶದ ಮೇರೆಗೆ ಹೋಗಿ ಶ್ರೀ ಎನ್.ವೈ.ಗೋಪಾಲಕೃಷ್ಣ ಅವರಿಗೆ ನಾವು ಉಪಾಧ್ಯಕ್ಷ ಸ್ಥಾನವನ್ನು ಕೊಡುತ್ತಿದ್ದೇವೆ. ತಾವು ಒಪ್ಪಿಕೊಳ್ಳಬೇಕು ಎಂದು ಕೇಳಿದರೆ ಅವರು ಅಷ್ಟು ದೂರದಿಂದ ಕುಳಿತುಕೊಂಡೇ ಅವರು ನಗುಮುಖದಿಂದಲೇ ನನಗೆ ಆಶೀರ್ವಾದ ಮಾಡಿದರು. ಅಂದರೆ ಈ ಒಂದು ಸ್ಥಾನದಲ್ಲಿ ಇದ್ದುಕೊಂಡು ಯಾವ ಭಾಷೆ ಇಲ್ಲಿ ಉಪಯೋಗಿಸಬೇಕು ಎನ್ನುವ ಬಗ್ಗೆ ನನಗೆ ಅನುಭವ ಇಲ್ಲ. ಹೊಸದಾಗಿ ಕೂಡ ನನಗೆ ಹೊರಗಡೆ ಹೋಗತಕ್ಕ ಬರತಕ್ಕಂಥ ಅಭ್ಯಾಸಗಳು ಹೆಚ್ಚಾಗಿ ಇರುವುದರಿಂದ ಇಲ್ಲಿ ಕುಳಿತು ಈ ಒಂದು ಕಲಾಪವನ್ನು ನಡೆಸತಕ್ಕಂಥ ಒಂದು ವ್ಯವಸ್ಥಿತವಾಗಿರತಕ್ಕಂಥ ನಿರ್ದೇಶನವನ್ನು ಕೊಡತಕ್ಕಂಥ ಸ್ಥಿತಿಗತಿಗಳನ್ನು ಬಹಳಷ್ಟು ದೂರದಿಂದ ನೋಡಿರತಕ್ಕದ್ದು ಇತ್ತು. ಈಗ ಸ್ವಲ್ಪ ಹತ್ತಿರದಲ್ಲೇ ಬಂದಿದ್ದೇನೆ. ಹೀಗಾಗಿ ಹಿರಿಯರು ಹೇಳುತ್ತಿದ್ದರು. ಅಪೋಸಿಷನ್ ಅವರ ಕಡೆಗೆ. ಮಾನ್ಯ ಯಡಿಯೂರಪ್ಪನವರೇ ಕಡೆಗೇ ಮಾನ್ಯ ಗೋಪಾಲ ಕೃಷ್ಣ ಅವರು ಕುಳಿತಿದ್ದಾರೆ ಎಂದು ಹೇಳುತ್ತಿದ್ದರು. ಅದು ನಿಜವಾಗಿಯೂ ಒಳ್ಳೆಯದು. ಏಕೆಂದರೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸ್ವತಂತ್ರವಾಗಿ ಪ್ರತಿ ಒಬ್ಬ ಶಾಸಕರೂ ಬಂದಿರತಕ್ಕ ಒಂದು ವಿಶೇಷವಾದ ಸಂದರ್ಭ. ಅವರವರ ಕ್ಷೇತ್ರಕ್ಕೆ ಸಂಬಂಧಪಟ್ಟಿರತಕ್ಕ ಸಮಸ್ಯೆಗಳು. ಅವರ ಕ್ಷೇತ್ರದಲ್ಲಿರತಕ್ಕಂಥ ಜನತೆಗೆ ಸಹಾಯ ಮಾಡಬೇಕು ಎನ್ನುವ ಉದ್ದೇಶದಿಂದಲೇ ಈ ಒಂದು ಸದನಕ್ಕೆ ಪಾದಾರ್ಪಣೆ ಮಾಡತಕ್ಕಂಥದು. ಆ ಜನಗಳ ಒಂದು ಆಶೀರ್ವಾದ ಇರುವುದರಿಂದ ನಾವಿಲ್ಲಿ ಶಾಸಕರಾಗಿ ಇಷ್ಟೆಲ್ಲಾ ಕಾರ್ಯಕಲಾಪಗಳಲ್ಲಿ ನಾವು ನಡೆಸಿಕೊಂಡು ಜನಗಳಿಗೆ ಅನುಕೂಲ ಆಗತಕ್ಕಂಥ ಒಂದು ವ್ಯವಸ್ಥೆಯನ್ನು ನಾವೆಲ್ಲರೂ ಮಾಡುತ್ತಿದ್ದೇವೆ. ಭಾರತ ದೇಶಕ್ಕೆ ಭಾರತ ದೇಶದಲ್ಲೇ ಬರತಕ್ಕಂಥ ಎಲ್ಲಾ ಸಂವಿಧಾನಗಳು. ನಮ್ಮಲ್ಲಿ ಸಂವಿಧಾನದತ್ತವಾಗಿ ಬಂದಿರತಕ್ಕಂಥ ಈ ಹಕ್ಕನ್ನು ಪ್ರತಿಪಾದಿಸುವಲ್ಲಿ ಬಹಳಷ್ಟು ನಾವು ವಿಧಾನಸಭೆಗಳನ್ನು ಕಂಡಿದ್ದೇವೆ. ಮಾನ್ಯ ವಾಟಾಳ್ ನಾಗರಾಜ್ ಅವರು ಹೋಗಿದ್ದಂತಹ ಸಂದರ್ಭದಲ್ಲಿ ಅವರು ಹೇಳಿದಂತಹ ರೀತಿಯಲ್ಲಿ ನಾವು ಹಿಂದೆ ಯೂರೋಪ್ ಕಂಟ್ರಿಗೆ ಸ್ಟಡಿ ಟೂರ್ ಎಂದು ಹೋದಂತಹ ಸಂದರ್ಭದಲ್ಲಿ ನಾವು ಸಾಕಷ್ಟು ದೇಶಗಳಲ್ಲಿ ಕೂಡ

ಈ ಅಸೆಂಬ್ಲಿಯ ಚಾಕಚಕ್ಯತೆಯನ್ನು ಕಂಡು ಬಂದಿದ್ದೇವೆ. ಆದರೆ ನಮ್ಮ ದೇಶದಲ್ಲಿ ಎಲ್ಲಾ ವಿಧಾನಸಭೆಗಳಿಗೆ ಹೋಲಿಸಿಕೊಂಡರೆ ಕರ್ನಾಟಕದಲ್ಲಿರತಕ್ಕ ವಿಧಾನಸಭೆ ನಿಜವಾಗಿಯೂ ಎಷ್ಟು ಪವಿತ್ರವಾಗಿದೆ ಎಂದು ಹೇಳಿದರೆ ಅದನ್ನು ಹೇಳಲಿಕ್ಕೇ ಸಾಧ್ಯವಿಲ್ಲ. ನಮ್ಮ ಅನುಭವದಲ್ಲಿ ನಾವು ನೋಡತಕ್ಕಂಥ ಸಂದರ್ಭದಲ್ಲಿ ಬಹಳಷ್ಟು ವಿಧಾನಸಭೆಗಳಲ್ಲಿ ಮೈಕುಗಳನ್ನು ಕಿತ್ತುಕೊಂಡು ಗಲಾಟೆ ಮಾಡಿಕೊಂಡು. ಅಂಗಿಗಳನ್ನು ಹರಿದುಕೊಂಡು ಹೊರಗಡೆ ಹೋಗತಕ್ಕ ಜನರನ್ನೇ ನಾವು ಹೆಚ್ಚಾಗಿ ಕಾಣುತ್ತೇವೆ. ಇಲ್ಲಿ ಬಹಳ ದೂರ ಎಂದರೆ ಹೆಚ್ಚು ಅಂದರೆ ಹೊರಗಡೆ ಹೋಗತಕ್ಕ ಅಭ್ಯಾಸ ಇದೆಯೇ ವಿನಹ ಯಾವ ರೀತಿಯಲ್ಲೂ ಕೂಡ ಒಬ್ಬರಿಗೊಬ್ಬರು ಅಸಮಾಧಾನವಾಗಿರತಕ್ಕ ವಾತಾವರಣವನ್ನು ನಾವು ಒಳಗಡೆಯೇ ಮಾಡಿಕೊಂಡು ಹೊರಗಡೆ ಮಾತ್ರ ಪಕ್ಕಪಕ್ಕದಲ್ಲೇ ಟೀ ಕುಡಿದುಕೊಂಡು ಇರುವಂತಹ ಸಂದರ್ಭವನ್ನು ಕೂಡ ನಾವು ನೋಡುವುದರಿಂದ ನಿಜವಾಗಲೂ ಬಹಳ ಸಂತೋಷವೆನಿಸುತ್ತದೆ. ಉಪಾಧ್ಯಕ್ಷನಾಗಿ ನಾನು ಮಾತನಾಡತಕ್ಕ ಸಂದರ್ಭಕ್ಕಿಂತ ಹೆಚ್ಚಾಗಿ ಒಬ್ಬ ಮಾನವೀಯತೆಯಿಂದ ನಾನು ಆದರ್ಶವಾಗಿ ಕಂಡಿರತಕ್ಕಂಥ ಈ ಒಂದು ರಾಜಕಾರಣದ ಬಗ್ಗೆ ನಿಜವಾಗಲೂ ನನಗೆ ಮಾತನಾಡಲು ಇಲ್ಲಿ ಒಂದು ಅವಕಾಶ ಸಿಕ್ಕಿದೆ ಎಂದು ಹೇಳಿ ನಾನು ಇಷ್ಟಪಡುತ್ತೇನೆ. ಏಕೆಂದರೆ 10 ವರ್ಷದ ನನ್ನ ರಾಜಕೀಯ ಜೀವನದಲ್ಲಿ ನಾನು ಯಾವತ್ತೂ ಕೂಡ ಯಾವ ಭಾಗದಲ್ಲಿಯೂ ನಿಂತು ಮಾತನಾಡಲೂ ಪ್ರಯತ್ನ ಪಟ್ಟವನಲ್ಲ. ಇದೇನೋ ನನಗೆ ಆ ದೈವದ ಒಂದು ಪ್ರೇರಣೆ. ದೈವ ಕೊಟ್ಟಿರತಕ್ಕಂಥ ಒಂದು ಕೊಡುಗೆ. ತಮ್ಮೆಲ್ಲರ ಆಶೀರ್ವಾದದ ಒಂದು ಕೊಡುಗೆ ಎಂದು ಹೇಳಿ ಇಲ್ಲಿ ಬಂದು ಕುಳಿತಿದ್ದೇನೆ. ನಾನು ಕರ್ತವ್ಯ ಮಾಡತಕ್ಕ ಸಂದರ್ಭದಲ್ಲಿ. ಉಪಾಧ್ಯಕ್ಷನಾಗಿ ಕಲಾಪವನ್ನು ನಡೆಸಿಕೊಂಡು ಹೋಗತಕ್ಕಂಥ ಈ ಒಂದು ಸಂದರ್ಭದಲ್ಲಿ ಆಕಸ್ಮಿಕವಾಗಿ ನನಗೆ ಗೊತ್ತಿಲ್ಲದೇ ಇರತಕ್ಕ ಸಂದರ್ಭಗಳಲ್ಲಿ ಕೂಡ ತಪ್ಪು ಒಪ್ಪು ಆಗಿದ್ದರೆ ತಾವೆಲ್ಲ ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಏಕೆಂದರೆ ಎಂಥೆಂಥೆಹದಕ್ಕೂ ನಿಮಗೆ ಕ್ಷಮಾದಾನದ ಶಕ್ತಿ ನಿಮ್ಮಲ್ಲಿದೆ. ಇದು ಕೂಡ ಅದೇ ರೀತಿಯಲ್ಲಿ ನೀವು ನಡೆಸಿಕೊಂಡು ಹೋಗುತ್ತೀರಿ ಎಂದು ಹೇಳಿ ಆ ಭಾವನೆ ಇಟ್ಟುಕೊಂಡು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಆಗತಕ್ಕಂಥ ಸಂದರ್ಭಗಳು ಬಂದರೂ ಕೂಡ ಆದರೆ ಪ್ರಜಾತಂತ್ರ ಸ್ವತಂತ್ರಕ್ಕೆ ಯಾವುದೇ ರೀತಿಯ ಧಕ್ಕೆ ಆಗದ ಹಾಗೆ ನಾನು ನಡೆದುಕೊಂಡು ಹೋಗುತ್ತೇನೆ. ನನಗೆ ಕೊಟ್ಟಿರ ತಕ್ಕಂಥ ಅಧಿಕಾರವನ್ನು ನ್ಯಾಯಸಮ್ಮತವಾಗಿ ಎಲ್ಲರೂ ಅನುಕೂಲಕರವಾಗಿರತಕ್ಕ ವಾತಾವರಣವನ್ನು ಕಲ್ಪಿಸಿ. ಪಕ್ಷಾತೀತವಾಗಿ ಕೆಲಸವನ್ನು ನಡೆಸಿಕೊಂಡು ಹೋಗುತ್ತೇನೆಂದು ಈ ಸಂದರ್ಭದಲ್ಲಿ ಹೇಳುತಾ ನಿಮ್ಮೆಲ್ಲರ

ಸಹಕಾರವನ್ನು ಕೂಡ ಮತ್ತೊಮ್ಮೆ ಕೇಳಿ ಈ ಮುಂದೆ ನಡೆಯತಕ್ಕ ಕಲಾಪಗಳಿಗೆ ತಾವು ಅವಕಾಶ ಮಾಡಿಕೊಡಬೇಕೆಂದು ಎಂದು ಹೇಳಿ ಮತ್ತೊಮ್ಮೆ ತಮ್ಮೆಲ್ಲರಿಗೂ ವಂದಿಸಿ ಬಿಟ್ಟು ನನ್ನ ಮಾತನ್ನು ಮುಗಿಸುತ್ತೇನೆ. ನಮಸ್ಕಾರ.

ವಿಷಯ:–ಬಾಲಬ್ರೂಯಿಯಲ್ಲಿ ಮಧ್ಯರಾತ್ರಿ ಕಡತಗಳನ್ನು ತೆಗೆದುಕೊಂಡು ಹೋಗಿ ಚರ್ಚೆ ನಡೆಸಿರುವುದು.

ಶ್ರೀ ಬಿ.ಎಸ್.ಯಡಿಯೂರಪ್ಪ (ಮಾನ್ಯ ವಿರೋಧ ಪಕ್ಷದ ನಾಯಕರು):– ಮಾನ್ಯ ಉಪಾಧ್ಯಕ್ಷರೇ ಈಗಾಗಲೇ ಒಂದು ನಿಲುವಳಿ ಸೂಚನೆ ಮೂಲಕವೇ ಪ್ರಸ್ತಾಪ ಮಾಡುವಂತಹ ವಿಷಯವನ್ನು ಅದಕ್ಕೆ ಎಳೆಯದೆಯೇ ಇವತ್ತೇನು ಬಾಲಬ್ರೂಯಿಯಲ್ಲಿ ಈ ಅತಿಥಿ ಗೃಹದಲ್ಲಿ ಮಧ್ಯರಾತ್ರಿಯವರೆಗೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಇತರೆ ಸಚಿವರು ಅಲ್ಲಿ ಗೌಡರ ಬಳಿಗೆ ಓಡಿದ ಒಂದು ಸರ್ಕಾರ ಎನ್ನುವ ಶೀರ್ಷಿಕೆಯಲ್ಲಿ ಅನೇಕ ವಿಷಯಗಳು ಇವತ್ತು ಪ್ರಕಟ ಆಗಿದೆ. ನಾನು ಒಂದೇ ಒಂದು ವಿನಂತಿಯನ್ನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮಾಡುತ್ತೇನೆ. ಇವತ್ತು ಖಾಸಗಿ ಕಾರುಗಳಲ್ಲಿ ಸಚಿವರು. ಅಧಿಕಾರಿಗಳೂ ಫೈಲನ್ನು ಹೊತ್ತುಕೊಂಡು ಗೌಡರ ಮುಂದೆ ಹೋಗಿ ಕುಳಿತುಕೊಳ್ಳುವಂತಹ ಪರಿಸ್ಥಿತಿ ಏನು ಇತ್ತು? ಗೌಡರು ಒಂದೊಂದು ಕಡತವನ್ನು ತಿರುವಿ ಹಾಕಿದಂತಹ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು. ಕೈಗಾರಿಕಾ ಸಚಿವರು ಮುಖ್ಯ ಕಾರ್ಯದರ್ಶಿಯವರಾದ ಶ್ರೀ ಮಿಶ್ರಾ ಅವರು ಕೈಕಟ್ಟಿಕೊಂಡು ಗಾಬರಿ ಮಾಡಿಕೊಂಡು ನಿಂತಿದ್ದರು ಎನ್ನುವಂತಹ ಒಂದು ವಿಚಾರ ಇದೆ. ಈ ರೀತಿಯ ಪರಿಸ್ಥಿತಿಗಳು ಬಂದು, ಪತ್ರಕರ್ತರು ಸಹ ಅತಿಥಿ ಗೃಹದ ಸಮೀಪ ಹೋಗುವುದಕ್ಕೆ ಆಗದಿರುವಂತಹ ಪರಿಸ್ಥಿತಿ ಆಯಿತು. ಅಧಿಕಾರಿಗಳ ವಾಹನ ಸಾಲಾಗಿ ನಿಂತಿರತಕ್ಕಂಥದ್ದು ಈ ಕನಕಪುರ–ಸಾತನೂರು ಪ್ರದೇಶದಲ್ಲಿ ಯಾವುದೋ ಒಂದು ಹೊಸ ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ ಹೊರಟಿರುವಂತಹದು. ಅದಕ್ಕೆ ಆಗಿರುವಂತಹ ಗೊಂದಲ. ಈ ಬಿಎಂಐಸಿ ಯೋಜನೆಯೇ ಈ ಗೊಂದಲಕ್ಕೆ ಕಾರಣ. ಇದೆಲ್ಲವೂ ಸಹಿತ ಪತ್ರಿಕೆಯಲ್ಲಿ ಬಂದಿದೆ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುವುದಕ್ಕೆ ಇಚ್ಛಿಪಡುತ್ತೇನೆ. ನಿಮ್ಮ ಹೈಕಮ್ಯಾಂಡ್ ಆದೇಶದ ಮೇರೆಗೆ ಖಾಸಗಿ ಕಂಪನಿಗೆ ಮತ್ತು...

ಶ್ರೀ ಎನ್. ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು):– ಈಗ ನಾನು ಆ ಮನೆಗೆ ಹೋಗುತ್ತಿದ್ದೇನೆ. ಮಾನ್ಯ ಸಿಂಧ್ಯಾರವರು ಈಗ ಉತ್ತರ ಕೊಡುತ್ತಾರೆ. ಆದರೂ ಕೂಡ ಒಂದು ಮಾತನ್ನು ಹೇಳುತ್ತಿದ್ದೇನೆ. ತಾವು ವಿರೋಧ ಪಕ್ಷದ ನಾಯಕರು. ಇವತ್ತು ಆ ವಿಚಾರವನ್ನೇನು ಪ್ರಸ್ತಾಪ ಮಾಡಿದ್ದೀರಿ. ನಾನು ರಾಜ್ಯದ